ಸದಭಿರುಚಿ ಸದಾಶಯ ಸದ್ವಿಚಾರ www.jaikarunadunews.com jaikarunadunews@gmail.com ಸ್ಥಳೀಯ ಸುದ್ದಿಯೊಂದಿಗೆ ಸಮಗ್ರ ಸುದ್ದಿ

ಜೈ ಕರುನಾಡು ಕಲಾ

JAI KARUNADU KALA KANNADA DAILY EVENING

ವೈವಿಧ್ಯಮಯ ಜಿಲ್ಲಾ ಮಟ್ಟದ ಸಂಜೆ ದಿನಪತ್ರಿಕೆ

ಸ್ಥಾಪಕ ಸಂಪಾದಕ : ಎಲ್.ವೆಂಕಟೇಶ್. ಗೌರವ ಸಂಪಾದಕ : ಪ್ರೊ.ಹೆಚ್.ಕಲ್ಲನ

ಸಂಪಾದಕ : ನಾಗರಾಜ ಕಲ್ಲುಕೊಪ್ಪ RNI No. KARKAN 65246/96 KA/SK/SMG/1258/2022-2024 ಸಂಪುಟ: 26 | ಸಂಚಿಕೆ: 317 | 25 ಅಕ್ಟೋಬರ್ 2023 ಬುಧವಾರ | ಪುಟ: 4 | ಬಿಡಿ ಪ್ರತಿ ಬೆಲೆ: ₹2 | ಮಾಸಿಕ: ₹50

Helpline No. : 9481500590
9481750591
Body Shop : 9845658157
MARUTI SUZUKI HYUNDAI ŠKODA VW
GANA MOTORS
Near Nanjappa Life Care, Sagar Main Road,
Gadikoppa, Shivamogga-05

ದಸರಾ ಸಂಪನ್ನ

ಶಿವಮೊಗ್ಗ: ಲಕ್ಷಾಂತರ ಜನರ ಹರ್ಷೋದ್ಗಾರಗಳ ನಡುವೆ ತಹಶೀಲ್ದಾರ್ ಎನ್.ಜೆ. ನಾಗರಾಜ್ ಅಂಬು ಕಡಿಯುವುದರೊಂದಿಗೆ ರಾವಣದಹನದ ನಡುವೆ ಬಾಣ ಬಿರುಸುಗಳ ಕಣ್ಣು ಕೋರೈಸುವ ಬೆಳಕಿನ ಹೊಳಪಿನೊಂದಿಗೆ 10 ದಿನದ ದಸರಾ ಸಂಪನ್ನಗೊಂಡಿತು. ಇಡೀ ಫ್ರೀಡಂ ಪಾರ್ಕ್ ಜನರಿಂದ ತುಂಬಿಹೋಗಿತ್ತು. ದೇವಾನುದೇವತೆಗಳು ಮೆರವಣಿಗೆಯಲ್ಲಿ ಫ್ರೀಡಂ ಪಾರ್ಕ್ ತಲುಪುವ ಮುನ್ನವೇ ಕುಟುಂಬ ಸಮೇತವಾಗಿ ಸಾವಿರಾರು ಜನರು ನೆರೆದಿದ್ದರು. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಅರ್ಚಕರಾದ ರಾಮಪ್ರಸಾದ್ ಮೊದಲಾದವರಿಂದ ಮಂತ್ರಘೋಷಗಳನ್ನ ಹಾಡ ಲಾಯಿತು. ಬನ್ನಿ ಕಡಿಯುವುದರಿಂದ 9 ದಿನಗಳ ದಸರಾ ಹಬ್ಬ ಸಂಪನ್ನಗೊಂಡಿದೆ. ನಂತರ 10 ತಲೆಯ ರಾವ ಣನನ್ನ ಸುಡಲಾಯಿತು. ಫ್ರೀಡಂ ಪಾರ್ಕ್‌ನಲ್ಲಿ ಸಾರ್ವ ಜನಿಕರು ಸಂಗೀತ ಆಲಿಸುತ್ತಾ, ವಿವಿಧ ಬಗೆಯ ತಿನಿಸುಗಳನ್ನು ಸವಿಯುತ್ತಾ ಹಲವು ವಸ್ತುಗಳನ್ನು ಖರೀದಿಸುತ್ತಾ ಸಂಭ್ರಮ ದಲ್ಲಿ ಮಿಂದರು. ಯುವಕ ಯುವತಿಯರು ಸೆಲ್ಫಿ ಮತ್ತು ವೀಡಿಯೋ ಮಾಡುವ ದೃಶ್ಯ ಸಾಮಾನ್ಯವಾಗಿತ್ತು. 3

ಬೈಕ್ ಅಪಘಾತ ಇಬ್ಬರು ಸಾವು

ಶಿವಮೊಗ್ಗ: ಕುಂಸಿ ಗ್ರಾಮದ ಸುತ್ತಕೋಟೆಯಲ್ಲಿ ಮಂಗಳ ವಾರ ರಾತ್ರಿ ಶಿವಮೊಗ್ಗದಿಂದ ಶಿರಾಳಕೊಪ್ಪದ ಮಂಚಿನಕೊಪ್ಪಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದ ಮೇಘರಾಜ್ (28), ಎದುರಿನಿಂದ ನಡೆದುಕೊಂಡು ಹೋಗುತ್ತಿದ್ದ ಶಿಕಾರಿಪುರ ತಾಲೂಕಿನ ಕೆಂಗ–ಟ್ಟೆಯ ಹನುಮಂತಪ್ಪ (35) ಅವರಿಗೆ ಡಿಕ್ಕಿ ಹೊಡೆದು ಬೈಕ್ ವಿದ್ಯುತ್ ಕಂಬಕ್ಕೆ ಗುದ್ದ ಪರಿಣಾಮ ಮೇಘರಾಜ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗಾಯಗೊಂಡಿದ್ದ ಹನುಮಂತಪ್ಪನವರನ್ನು ಮೆಗ್ಗಾನ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಶಿವಮೊಗ್ಗದ ಹೊನ್ನಾಪುರದಲ್ಲಿ ವಾಸಿಸುತ್ತಿದ್ದ ಮಂಚಿಕೊಪ್ಪದ ಮೇಘರಾಜ್ ಸ್ನೇಹಿತರೊಂದಿಗೆ ಬೆಳಗ್ಗೆ ಸಕ್ರೆಬೈಲಿಗೆ ತೆರಳಿ ಅಲ್ಲಿಂದ ರಾತ್ರಿ ಚೋರಡಿ ಮೂಲಕ ಶಿಕಾರಿಪುರಕ್ಕೆ ತೆರಳುವಾಗ ಈ ಘಟನೆ ನಡೆದಿದೆ. ಶವವನ್ನು ಮೆಗ್ಗಾನ್ ಆಸ್ಪತ್ರೆಯಲ್ಲಿರಿಸಲಾಗಿದೆ.

ಏಷ್ಯನ್ ಪ್ಯಾರಾಲಿಂಪಿಕ್ಸ್ : ಜಾವೆಲಿನ್‌ನಲ್ಲಿ ಭಾರತಕ್ಕೆ ಚಿನ್ನ

ಹ್ಯಾಂಗ್‌ಝೌ: ಏಷ್ಯನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಸುಮಿತ್ ಆಂಟಿಲ್ ಇಂದು ಜಾವೆಲಿನ್ ಥ್ರೋ ಎಫ್64 ಸ್ಪರ್ಧೆಯಲ್ಲಿ 73.29 ಮೀಟರ್‌ಗಳ ದೂರ ಈಟಿ ಎಸೆದು ವಿಶ್ವ ದಾಖಲೆಯೊಂದಿಗೆ ಚಿನ್ನದ ಪದಕ ಪಡೆದರು. 25ರ ಹರೆಯದ ಸುಮಿತ್ ಈ ವರ್ಷದ ಆರಂಭದಲ್ಲಿ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 70.83 ಮೀಟರ್‌ಗಳ ಜಾವೆಲಿನ್‌ಎಸೆದು ಚಿನ್ನದ ಪದಕ ಗೆದ್ದಿದರು ಅದು ವಿಶ್ವ ದಾಖಲೆಯಾಗಿತು, ಈಗ ಮತ್ತಷ್ಟು ದೂರ ಎಸೆದು ದಾಖಲೆಯನ್ನು ಇನ್ನೂ ಉತ್ತಮಗೊಳಿಸಿದ್ದಾರೆ. ಭಾರತದ ಮತ್ತೊಬ್ಬ ಆಟಗಾರ ಪುಷ್ಪೇಂದ್ರ ಸಿಂಗ್ 62.06 ಮೀಟರ್ ಜಾವೆಲಿನ್‌ಎಸೆದು ಕಂಚಿನ ಪದಕ ಗೆದ್ದರು. ಶ್ರೀಲಂಕಾದ ಸಮಿತಾ ಅರಾಚಿ ಕೊಡಿತುವಕ್ಕು ಅವರು 64.09 ಮೀ. ಎಸೆದು ಬೆಳ್ಳಿ ಪಡೆದರು. ಹ್ಯಾಂಗ್‌ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪ್ರಸ್ತುತ ಭಾರತ 10 ಚಿನ್ನಪದಕ ಗೆದ್ದಿದೆ ಒಟ್ಟಾರೆ ಪದಕಗಳ ಸಂಖ್ಯೆ 36ಕ್ಕೆ ಏರಿಕೆಯಾಗಿದೆ.

ತುಂಗಾ ಉಳಿಸಿ

ಜಾಗೃತಿ, ಛಾಯಾಚಿತ್ರ ಪ್ರದರ್ಶನ ಮತ್ತು ನದಿ ಉಳಿಸೋಣ ಕಾರ್ಯಕ್ರಮ

ಶಿವಮೊಗ್ಗ: ನಿರ್ಮಲ ತುಂಗಾ ಅಭಿಯಾನ, ಗೋಪಾಳದ ಚಂದನವನ ಪಾರ್ಕ್ ಬಳಗ ಇವರ ಆಶ್ರಯದಲ್ಲಿ ಇಂದು ತುಂಗಾ ಉಳಿಸಿ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಛಾಯಾಚಿತ್ರ ಪ್ರದರ್ಶನ ಮತ್ತು ನದಿ ಉಳಿಸೋಣ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪರಿಸರವಾದಿ ಪ್ರೊ. ಬಿ.ಎಂ. ಕುಮಾರಸ್ವಾಮಿ ಇಂದು ತುಂಗೆ ಸಾಕಷ್ಟು ಮಲಿನಗೊಂಡಿದ್ದಾಳೆ. ಶೃಂಗೇರಿಯಿಂದ ಹಿಡಿದು ಶಿವಮೊಗ್ಗದವರೆಗೂ ಕೊಳಚೆಯನ್ನು ತುಂಬಿಕೊಂಡೇ ಹರಿಯುತ್ತಿದ್ದಾಳೆ. ತುಂಗಾಪಾನ ಗಂಗಾ ಸ್ನಾನ ಎಂಬ ಮಾತುಈಗ ಸುಳ್ಳಾಗಿದೆ. ಕುಡಿಯಲು ಇರಲಿ, ಬಳಸಲು ಕೂಡ ತುಂಗಾ ನೀರು ಯೋಗ್ಯವಾಗಿಲ್ಲ ಎಂದರು.

ಶುದ್ಧೀಕರಣ ಘಟಕಗಳನ್ನು ಜಿಲ್ಲಾಡಳಿತವಾಗಲಿ, ಮಹಾನಗರ ಪಾಲಿಕೆಯಾಗಲಿ ಮಾಡಿಲ್ಲ. ನದಿಗೆ ಸಾರ್ವಜನಿಕರು ತಮ್ಮ ದಿಂಬು ಹಾಸಿಗೆಯಿಂದ ಹಿಡಿದು ಹೋಟೆಲ್‌ಗಳವರು ಮಾಂಸ, ದನಕರುಗಳ ಶವಗಳನ್ನು ಕೂಡ ಎಸೆಯುತ್ತಿದ್ದಾರೆ. ಜಲಚರ ಪ್ರಾಣಿಗಳೆಲ್ಲ ಸತ್ತು ಹೋಗಿವೆ. ಈ ಜಲಜಾಗೃತಿ ಜನಜಾಗೃತಿಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಿರ್ಮಲ ತುಂಗಾ ಅಭಿಯಾನ ಕಳೆದ ಒಂದು ವರ್ಷದಿಂದ ತುಂಗಾ ನದಿ ಉಳಿವಿಗಾಗಿ ಹೋರಾಡುತ್ತಾ ಬಂದಿದೆ ಎಂದರು.

ಡಾ. ಶ್ರೀಪತಿ ಮಾತನಾಡಿ, ಸಾರ್ವಜನಿಕರು ಎಲ್ಲೋ ಎಸೆದ ಒಂದು ಪ್ಲಾಸ್ಟಿಕ್ ವಸ್ತು ಸಹ ರಾಜಕಾಲುವೆಗಳ ಮೂಲಕ ತುಂಗಾ ನದಿ ಸೇರುತ್ತದೆ. ಜೊತೆಗೆ ನದಿಯ ಆಸುಪಾಸಿನ ಗದ್ದೆ–ತೋಟಗಳಲ್ಲಿ ಬಳಸುವ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳು ಕೂಡ ನದಿಗೆ ಸೇರುತ್ತಿವೆ. ಶುದ್ಧ ಕುಡಿಯುವ ನೀರಿನ ಸಮಸ್ಯೆ ಸಾಕಷ್ಟಿದೆ. ಜನರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ನಾವು ನಿರ್ಮಲ ತುಂಗಾ ಅಭಿಯಾನದ ಮೂಲಕ ಗಾಜನೂರಿನಿಂದ ಹೊನ್ನಾಳಿಯವರೆಗೆ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಜೊತೆಗೆ ನಗರದ ಸಾರ್ವಜನಿಕ ಸ್ಥಳಗಳಲ್ಲಿ ಈ ಜಾಗೃತಿ ಕ್ರಮ ನಿರಂತರವಾಗಿ ನಡೆ–

ಯುತ್ತಿದೆ ಎಂದರು. ನಿವೃತ್ತ ಇಂಜಿನಿಯರ್ ಎ. ಹಾಲೇಶಪ್ಪ ಮಾತನಾಡಿ, ನದಿಯ ನೀರು ಸ್ವಚ್ಛವಾಗಿಡಲು ಸಾರ್ವಜನಿಕರ ಪಾತ್ರವೂ ಇದೆ. ತಮ್ಮ ತಮ್ಮ ಮನೆಗಳಲ್ಲಿ ಕಸಗಳನ್ನು ಸರಿಯಾಗಿ ವಿಂಗಡಣೆ ಮಾಡಿದರೆ ಸಾಕು. ಜೊತೆ–ಗೆ ನೀರನ್ನು ಮಿತವಾಗಿ ಬಳಸಬೇಕು. ಎಲ್ಲರೂ ಸ್ವಚ್ಛತೆಗೆ ಆದ್ಯತೆ ಕೊಟ್ಟ–ರೆ ಜೊತೆಗೆ ಸಂಬಂಧಪಟ್ಟ ಇಲಾಖೆಗಳು ನಗರದ ಎಲ್ಲ ಕೊಳಚೆ ನೀರನ್ನು ಸರಿಯಾದ ರೀತಿಯಲ್ಲಿ ಶುದ್ಧೀಕರಣ ಮಾಡಿ ನದಿಗೆ ಬಿಟ್ಟರೆ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಬಗೆಹರಿಯುತ್ತದೆ ಎಂದರು.

ಈ ಸಂದರ್ಭದಲ್ಲಿ ನಿರ್ಮಲ ತುಂಗಾ ಅಭಿಯಾನದ ಪ್ರಮುಖರಾದ ತ್ಯಾಗರಾಜ್ ಮಿತ್ಯಾಂತ, ಬಾಲಕೃಷ್ಣ ನಾಯ್ಡು, ಡಾ.ಶ್ರೀಧರ್, ಜಗನ್ನಾಥ್, ರಾಜೇಶ್ ಹಾಗೂ ಚಂದನವನ ಪಾರ್ಕಿನ ಪ್ರಮುಖರಾದ ಜಯಣ್ಣ, ಜಿ.ನಾಗಪ್ಪ, ದೇವರಾಜ್, ನಾಗರಾಜ್ ಸೇರಿದಂತೆ ಹಲವರಿದ್ದರು.

ಹೆಣ್ಣುಮರಿಗೆ ಜನ್ಮ ನೀಡಿದ ನೇತ್ರಾವತಿ

ಶಿವಮೊಗ್ಗ: ದಸರಾಕ್ಕೆ ಬಂದ ನೇತ್ರಾವತಿ ಆನೆ ಮರಿ ಹಾಕಿದೆ. ದಸರಾ ಹಬ್ಬದ ಆಯುಧ ಪೂಜೆಯ ದಿನದಂದೇ ರಾತ್ರಿ 10 ಗಂಟೆಗೆ ಅಂಬಾರಿ ಹೊರಲು ಬಂದ ನೇತ್ರಾವತಿ ಹೆಣ್ಣುಮರಿಗೆ ಜನ್ಮ ನೀಡಿದೆ.

ಗರ್ಭಧರಿಸಿ 24 ತಿಂಗಳಿಗೆ ಆನೆಗಳಿಗೆ ಹೆರಿಗೆ ಆಗೋದು ಎಂದು ಹೇಳಲಾಗುತ್ತದೆ ಆದರು, ಹೆರಿಗೆಯಾಗಲು ಕನಿಷ್ಠ 18 ತಿಂಗಳು ಹಿಡಿಯಲಿದೆ ಎಂಬುದು ವೈದ್ಯಲೋಕದ ಮಾತಾಗಿದೆ. ನೇತ್ರಾವತಿಗೆ 19 ತಿಂಗಳು ತುಂಬಿದ ಹಿನ್ನಲೆಯಲ್ಲಿ ಹೆರಿಗೆಯಾಗಿದೆ. ಈ ದಿಡೀರ್ ಹೆರಿಗೆ ಚರ್ಚೆಗೆ ಗ್ರಾಸವಾಗುತ್ತಿದೆ. ತಾಯಿ ಮತ್ತು ಮರಿ ಎರಡೂ ಆರೋಗ್ಯದಿಂದ ಇವೆ. ದಸರಾ ಹಬ್ಬದ ಮೆರವಣಿಗೆಯಲ್ಲಿ ಭಾಗಿಯಾಗಲು ಸಕ್ರೆಬೈಲಿನಿಂದ ಮಹಾನಗರ ಪಾಲಿಕೆಯ ವತಿಯಿಂದ ಮೂರು ಆನೆಗಳನ್ನ ಪ್ರತಿ ವರ್ಷದಂತೆ ಈ ಬಾರಿಯೂ ಆಹ್ವಾನಿಸಲಾಗಿತ್ತು. ಈ ಮೆರವಣಿಗೆಯಲ್ಲಿ ಭಾಗಿಯಾಗಲು ಸಾಗರ, ನೇತ್ರಾವತಿ ಹಾಗೂ ಹೇಮಾವತಿ ಆನೆಯನ್ನ ಕರೆತರಲಾಗಿತ್ತು. ನಿನ್ನೆ ಸಂಜೆ ಮೆರವಣಿಗೆಯ ತಾಲೀಮು ನಡೆಸಲಾಗಿತ್ತು. 3

ಭೂಗತಪಾತಕಿ ರವಿ ಪೂಜಾರಿ ಸಹಚರ ಹನೀಫ್ ಸೆರೆ

ಮಂಗಳೂರು: ಭೂಗತಪಾತಕಿ ರವಿ ಪೂಜಾರಿ ಸಹಚರನನ್ನು ಕಾರ್ಯಾಚರಣೆ ಕೈಗೊಂಡ ಕೊಣಾಜೆ ಠಾಣೆ ಪೊತಿತಿಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಟೋರಿಯಸ್ ಶಾರ್ಪ್ ಶೂಟರ್ ಕೇರಳದ ಮಂಜೇಶ್ವರ

ಪೈವಳಿಕೆ ನಿವಾಸಿ ಮೊಹಮ್ಮದ್ ಹನೀಫ್ ಯಾನೆ ಅಲಿ ಮುನ್ನಾ ಬಂಧಿತ ಆರೋಪಿ ಯಾಗಿದ್ದಾನೆ. ಆರೋಪಿ ಮೊಹಮ್ಮದ್ ಹನೀಫ್ ಕರಾವಳಿ ಜಿಲ್ಲೆಯ ಹಲವು ಠಾಣೆಗಳಲ್ಲಿ ವಾರೆಂಟ್ ಎದುರಿಸುತ್ತಿದ್ದಾನೆ. ಆರೋಪಿ ಹನೀಫ್ ನಟೋರಿ ಯಸ್ ಕ್ರಮಿನಿಲ್ ಆಗಿದ್ದು, ರವಿಪೂಜಾರಿಯ ಎಲ್ಲ ಕೃತ್ಯಗಳಿಗೆ ಮಂಗಳೂರು ಸೇರಿದಂತೆ ಕರಾವಳಿ ಜಿಲ್ಲೆಗಳನ್ನು ಕಾರ್ಯಕ್ಷೇತ್ರ ಮಾಡಿಸಿಕೊಂಡಿದ್ದು ಹಲವು ಶೂಟೌಟ್, ದರೋಡೆ, ಬೆದರಿಕೆ ಪ್ರಕರಣದಲ್ಲಿ ರಾಜ್ಯದ ಅನೇಕ ಠಾಣೆಗಳಿಂದ ಬಂಧನ ವಾರಂಟ್ ಎದುರಿಸುತ್ತಿದ್ದನು. 3

ಹುಲಿ ಉಗುರು ತಂದ ಸಂಕಷ್ಟ
ನಟರಿಗೆ ಉರುಳು

ಬೆಂಗಳೂರು: ಹುಲಿ ಉಗುರಿನ ಪೆಂಡೆಂಟ್ ಧರಿಸಿರುವ ಸಿನಿಮಾ ನಟರು ಹಾಗೂ ಗಣ್ಯರು ಹಾಗೂ ಖ್ಯಾತ ನಾಮರಿಗೆ ಈಗ ಸಂಕಷ್ಟ ಎದುರಾಗಿದೆ. ಯಾರೇ ಆಗಲಿ ಹುಲಿ ಉಗುರು ಧರಿಸಿದರೆ ಅವರ ವಿರುದ್ಧ ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಕ್ರಮ ಕೈಗೊಳ್ಳುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಎಚ್ಚರಿಕೆ ನೀಡಿದ್ದಾರೆ.

ಈ ಸಚಿವರ ಈ ಎಚ್ಚರಿಕೆ ಹುಲಿ ಉಗುರಿನ ಪೆಂಡೆಂಟ್ ಧರಿಸಿ ಫೋಟೊಗಳಿಗೆ ಪೋಸ್ ಕೊಟ್ಟಿರುವ ಸಿನಿಮಾ ನಟರು, ಗಣ್ಯರು. ಖ್ಯಾತ ನಾಮರಿಗೆ ಸಂಕಷ್ಟ ತಂದಿದೆ. ಕನ್ನಡದ ಟಿವಿ ವಾಹಿನಿಯ ರಿಯಾಲಿಟಿ ಶೋ ಬಿಗ್‌ಬಾಸ್‌ನ ಸ್ಪರ್ಧಿಯಾಗಿದ್ದ ವರ್ತೂರು ಸಂತೋಷ್ ಅವರನ್ನು ಪೊಲೀಸರು ಹುಲಿ ಉಗುರಿನ ಪೆಂಡೆ–ಂಟ್ ಧರಿಸಿರುವ ಆರೋಪದ ಮೇಲೆ ಬಂಧಿಸಿದ ನಂತರ ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದ ಹಲವು ನಟರಿಗೂ ಕಾನೂನಿನ ಕ್ರಮದ ಭೀತಿ ಎದುರಾಗಿದ್ದು, ಹಲವರ ವಿರುದ್ಧ ದೂರುಗಳು ದಾಖಲಾಗಿದೆ.

ನಟ ಹಾಗೂ ಸಂಸದ ಜಗ್ಗೇಶ್, ನಾಯನ ನಟ ದರ್ಶನ್, ನಿಖಿಲ್‌ಕುಮಾರಸ್ವಾಮಿ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಇವರುಗಳು ಹುಲಿ ಉಗುರಿನ ಫೋಟೊಗಳು ವೈರಲ್ ಆಗಿದ್ದು, ಇವರ ವಿರುದ್ಧವೂ ಕ್ರಮಕೈಗೊಳ್ಳಬೇಕೆಂಬ ಒತ್ತಡವೂ ಹೆಚ್ಚಿದೆ. ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರಖಂಡ್ರೆಖ್ಯಾತ ಚಲನಚಿತ್ರ ನಟ ದರ್ಶನ್ ತೂಗುದೀಪ

ದಾಖಲೆ ಇದೆ

ತಮ್ಮ ಬಳಿ ಇರುವ ಹುಲಿ ಚರ್ಮ ಸೇರಿದಂತೆ ಇನ್ನಿತರೆ ವಸ್ತುಗಳಿಗೆ ದಾಖಲೆ ಇದೆ ಎಂದು ಜ್ಯೋತಿಷಿ ವಿನಯ್ ಗುರೂಜಿ ಹೇಳಿದ್ದಾರೆ. ಬಿಗ್ ಬಾಸ್ ಸ್ಪರ್ಧಿ ವರ್ತೂರು ಸಂತೋಷ್ ಅವರನ್ನು ಅರಣ್ಯಾಧಿಕಾರಿಗಳು ಬಂಧಿಸಿದ ಬೆನ್ನಲ್ಲೇ ವಿನಯ್ ಗುರೂಜಿ ಅವರು ಹುಲಿ ಚರ್ಮದ ಮೇಲೆ ಕುಳಿತಿರುವ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ವಿನಯ್ ಗುರೂಜಿ, ತಮ್ಮ ಮೇಲೆ ಕೇಳಿ ಬರುತ್ತಿರುವ ಆರೋಪಕ್ಕೆ ದಾಖಲೆಗಳಿವೆ ಎಂದು ತಿಳಿಸಿದ್ದಾರೆ.

ಹಾಗೂ ವಿನಯ್‌ಗುರೂಜಿ ಸಾರ್ವಜನಿಕವಾಗಿ ಹುಲಿ ಉಗುರು ಧರಿಸಿರುವ ಬಗ್ಗೆ ಕ್ರಮ ಜರುಗಿಸಲು ಅಧಿಕಾರಿಗಳು ಬದ್ಧರಾಗಿದ್ದಾರೆ. ಸಾರ್ವಜನಿಕರು ಈ ಬಗ್ಗೆ ದೂರು ನೀಡಿದರೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.ರಾಜ್ಯದಲ್ಲಿ ಹುಲಿ ಉಗುರಿನ ಪೆಂಡೆಂಟ್ ಸೇರಿದಂತೆ ಇತರೆ ವಸ್ತುಗಳ ಬಳಕೆ ಮಾಡುತ್ತಿರುವುದು ಕಂಡು ಬಂದಿದೆ. ಈಗಾಗಲೇ ಹಲವು ಬಂಧನಗಳು ನಡೆದಿವೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.ಈ ಹಿಂದೆಯೂ ಪ್ರಾಣಿಗಳನ್ನು ಹತ್ಯೆ ಮಾಡಿ, ಅವುಗಳ ಹಲ್ಲು, ಚರ್ಮ, ಕೊಂಬು 3

ನವರಾತ್ರಿ ಉತ್ಸವದ ಕೊನೆ ದಿನವಾದ ಮಂಗಳವಾರ ಶ್ರೀ ಕ್ಷೇತ್ರ ಸಿಗಂದೂರು ಚೌಡೇಶ್ವರಿ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಾರಗನಜೆಡ್ಡು ಶ್ರೀ ಕ್ಷೇತ್ರ ಕಾರ್ತಿಕೇಯ ಪೀಠದ ಶ್ರೀ ಯೋಗೇಂದ್ರ ಅವಧೂತ ಶ್ರೀಗಳು ದಿವ್ಯ ಉಪಸ್ಥಿತಿಯಲ್ಲಿ ನೆರವೇರಿದವು. ಈ ಸಂದರ್ಭ ಶ್ರೀಕ್ಷೇತ್ರದ ಧರ್ಮದರ್ಶಿ ಡಾ.ಎಸ್.ರಾಮಪ್ಪ, ಕಾರ್ಯದರ್ಶಿ ಎಚ್.ಆರ್.ರವಿಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ತೆನೆ ಇಳಿಸಿ ಕೈ ಹಿಡಿದ ಎಂ. ಶ್ರೀಕಾಂತ್

ಬೆಂಗಳೂರು/ಶಿವಮೊಗ್ಗ: ಜೆಡಿಎಸ್ ಜಿಲ್ಲಾಧ್ಯಕ್ಷ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಆಪ್ತರಾಗಿದ್ದ ಎಂ. ಶ್ರೀಕಾಂತ್ ತಮ್ಮ ನೂರಾರು ಬೆಂಬಲಿಗರೊಂದಿಗೆ ಇಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆ ಗೊಂಡರು. ಕಳೆದ ಒಂದು ತಿಂಗಳ ಹಿಂದೆಯಷ್ಟೆ ಜೆಡಿಎಸ್ ತೊರೆಯುವ ಬಗ್ಗೆ ಘೋಷಣೆ ಮಾಡಿದ್ದ ಎಂ. ಶ್ರೀಕಾಂತ್ ಅವರು ಇಂದು ಕೆಪಿಸಿಸಿ ಕಚೇರಿಯಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಸೇರಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಶ್ರೀಕಾಂತ್ ಮತ್ತು ಅವರ ಬೆಂಬಲಿಗ ಜೆಡಿಎಸ್ ಮುಖಂಡರುಗಳನ್ನು ಪಕ್ಷಕ್ಕೆ ಬರಮಾಡಿಕೊಂಡರು. ಶಿವಮೊಗ್ಗ ಮಹಾನಗರಪಾಲಿಕೆ ಸದಸ್ಯ ನಾಗರಾಜ ಕಂಕಾರಿ, ಮಾಜಿ ಉಪಮೇಯರ್ ಪಾಲಾಕ್ಷಿ, ಯುವ ಜೆಡಿಎಸ್ ಪದಾಧಿಕಾರಿಗಳಾದ ಸೂಲಯ್ಯ ಸೇರಿದಂತೆ ಅನೇಕ ಮುಖಂಡರು, ಜೆಡಿಎಸ್ ವಿವಿಧ ಘಟಕಗಳ ಪದಾಧಿಕಾರಿಗಳು ಕಾಂಗ್ರೆಸ್ ಸೇರಿದರು.

ಜನಪ್ರಿಯ ಪ್ರಿಂಟರ್ಸ್ & ಪಬ್ಲಿಷರ್ಸ್
ನಮ್ಮಲ್ಲಿ ಮದುವೆ ಪತ್ರಿಕೆಗಳ ಪ್ರಿಂಟಿಂಗ್, ಬುಕ್ ಬೈಂಡಿಂಗ್, ಲ್ಯಾಮಿನೇಷನ್, ಡಿಟಿಪಿ, ಆಫ್‌ಸೆಟ್ ಪ್ರಿಂಟಿಂಗ್, ಫ್ಲೆಕ್ಸ್ ಪ್ರಿಂಟ್, ವಿಸಿಟಿಂಗ್ ಕಾರ್ಡ್, ರಬ್ಬರ್‌ಸ್ಟ್ಯಾಂಪ್, ಬಿಲ್ ಬುಕ್, ಲೆಟರ್ ಪ್ಯಾಡ್ ಹಾಗೂ ಕಲರ್ಸ್ ಜೆರಾಕ್ಸ್ ಇತ್ಯಾದಿ ಮಾಡಿಕೊಡಲಾಗುವುದು.
ಶ್ರೀ ನಾರಾಯಣಗುರು ಸಹಕಾರ ಭವನ, ಸಾಗರ ರಸ್ತೆ, ಗಾಡಿಕೊಪ್ಪ, ಶಿವಮೊಗ್ಗ
ಮೊಬೈಲ್ 9448808516 janapriyapublishers@gmail.com

ರಾಜ್ಯಮಟ್ಟದ ಹಸೆ, ಬೂಮಣ್ಣೆ ಬುಟ್ಟಿ ಚಿತ್ತಾರ ಸ್ಪರ್ಧೆಗೆ

ಧರ್ಮ

ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥

ಮದ್ ವ್ಯಪಾಶ್ರಯಃ ಎಂದರೆ ಪರಮ ಪ್ರಭುವಿನ ರಕ್ಷಣೆಯಲ್ಲಿ ಎಂದರ್ಥ. ಐಹಿಕ ಸೋಂಕಿನಿಂದ ಬಿಡುಗಡೆ ಹೊಂದಲು ಪರಿಶುದ್ಧ ಭಕ್ತನು ಪರಮ ಪ್ರಭುವಿನ ಅಥವಾ ಅವನ ಪ್ರತಿನಿಧಿಯಾದ ಗುರುವಿನ ಮಾರ್ಗದರ್ಶನದಲ್ಲಿ ಕಾರ್ಯ ಮಾಡುತ್ತಾನೆ. ಪರಿಶುದ್ಧ ಭಕ್ತನಿಗೆ ಕಾಲದ ಮಿತಿಯಿಲ್ಲ. ಅವನು ಯಾವಾಗಲೂ, ದಿನದಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ, ನೂರಕ್ಕೆ ನೂರರಷ್ಟು ಮಟ್ಟಿಗೆ, ಪರಮ ಪ್ರಭುವಿನ ಆದೇಶಕ್ಕೆ ಅನುಗುಣವಾಗಿ, ವ್ಯಾಪಾರಗಳಲ್ಲಿ ತೊಡಗಿರುತ್ತಾನೆ. ಹೀಗೆ ಕೃಷ್ಣಪ್ರಜ್ಞೆಯಲ್ಲಿ ನಿರತನಾದ ಭಕ್ತನಿಗೆ ಪ್ರಭುವು ಬಹು ಕರುಣಾಳು. ಎಷ್ಟು ಕಷ್ಟಗಳಿದ್ದರೂ ಕಡೆಗೆ ಅವನಿಗೆ ದಿವ್ಯನಿವಾಸ ಅಥವಾ ಕೃಷ್ಣಲೋಕವು ಲಭ್ಯವಾಗುತ್ತದೆ. ಅಲ್ಲಿ ಅವನಿಗೆ ಪ್ರವೇಶ ಖಚಿತಃ ಇದರಲ್ಲಿ ಅನುಮಾನವೇ ಇಲ್ಲ. ಆ ಪರಮ ನಿವಾಸದಲ್ಲಿ ಯಾವುದೂ ಬದಲಾಗುವುದಿಲ್ಲ: ಎಲ್ಲವೂ ಶಾಶ್ವತ, ಅವ್ಯಯ ಮತ್ತು ಜ್ಞಾನಮಯ.

ಭಾರತರತ್ನ ಅಬ್ದುಲ್ ಕಲಾಂ ಈಗ ಒಂದು ದಂತಕತೆ

ಅಬ್ದುಲ್ ಕಲಾಂ



ಭಾರತರತ್ನ ಅಬ್ದುಲ್ ಕಲಾಂ ಈಗ ಒಂದು ದಂತಕತೆ. ವಿಜ್ಞಾನಿಯಾಗಿ, ರಾಷ್ಟ್ರಪತಿಯಾಗಿ, ಉತ್ತಮ ವಾಗ್ಮಿಗಳಾಗಿ ವಿಶ್ವ ಪ್ರಸಿದ್ಧರಾಗಿದ್ದರು. ಪ್ರಾಮಾಣಿಕತೆ ಮತ್ತು ಸರಳತೆಗೆ ಇನ್ನೊಂದು ಹೆಸರೇ ಕಲಾಂ ಎಂಬುದಾಗಿತ್ತು. ಜನಸಾಮಾನ್ಯರ ಬಗ್ಗೆ ಅವರಿಗಿದ್ದ ಗೌರವ, ದುಡಿಯುವ ಜನರ ಬಗ್ಗೆ ಇದ್ದ ಅವರ ಪ್ರೀತಿ ಅನನ್ಯ. ವಿದ್ಯಾರ್ಥಿಗಳ ಬಗ್ಗೆ ಅತೀವವಾದ ಭರವಸೆಯನ್ನಿಟ್ಟುಕೊಂಡಿದ್ದ ಕಲಾಂ ಎಲ್ಲಿಗೇ ಹೋಗಲಿ, ಮಕ್ಕಳೊಡನೆ ಸಂವಾದ ಮಾಡುವುದು ಅವರಿಗೆ ಅತ್ಯಂತ ಪ್ರಿಯ ವಿಷಯವಾಗಿತ್ತು. ಅವರೆಂದೂ ಸಮಾರಂಭಗಳಲ್ಲಿ ಅವರಿಗಾಗಿ ತರಿಸುತ್ತಿದ್ದ ವಿಶೇಷ ಕುರ್ಚಿಯಲ್ಲಿ ಕುಳಿತುಕೊಳ್ಳದೆ, ಎಲ್ಲರೂ ಕುಳಿತುಕೊಳ್ಳುವ ಸಾಮಾನ್ಯ ಕುರ್ಚಿಯಲ್ಲಿಯೇ ಕುಳಿತುಕೊಳ್ಳುತ್ತಿದ್ದುದು ಅವರ ಸರಳತೆಗೆ ನಿದರ್ಶನವಾಗಿತ್ತು.

ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಗಳಾಗಿ ಚುನಾಯಿತರಾದ ಹೊಸತರಲ್ಲಿ ತ್ರಿವೇಂದ್ರಂ ಗೆ ಆಗಮಿಸಿದ್ದರು. ಅವರಿಗೆ ಅಲ್ಲಿನ ರಾಜಭವನದಲ್ಲಿ ಅವರಿಗೆ ವಾಸ್ತವ್ಯಕ್ಕೆ ಏರ್ಪಾಟಾಗಿತ್ತು. ಪದ್ಧತಿಯಪ್ರಕಾರ ರಾಷ್ಟ್ರಪತಿಗಳಿಗೆ ಇಬ್ಬರು ಅತಿಥಿಗಳನ್ನು ತಮ್ಮೊಡನೆ ಕರೆದೊಯ್ಯುವ ಅಧಿಕಾರವಿತ್ತು. ಅವರಿಗೂ ಸಹ ರಾಷ್ಟ್ರಪತಿಗಳಿಗೆ ನೀಡುವ ಆತಿಥ್ಯವನ್ನೇ ನೀಡುವ ಪದ್ಧತಿ. ಹೀಗಾಗಿ ಅಬ್ದುಲ್ ಕಲಾಂ ಅವರು ಇಬ್ಬರು ಅತಿಥಿಗಳನ್ನು ತಮ್ಮೊಡನಿರಲು ಆಯ್ಕೆ ಮಾಡಿಕೊಂಡಿದ್ದರು. ಅದರಲ್ಲಿ ಒಬ್ಬರು ರಸ್ತೆ ಬದಿಯಲ್ಲಿ, ಬಿಸಿಲಿಗೆ ಮೈಯೊಡ್ಡಿ ಚಪ್ಪಲಿ ಹೊಲಿಯುತ್ತಿದ್ದ ಬಡ ಚಮ್ಮಾರ. ಇನ್ನೊಬ್ಬರು ಒಂದು ಪುಟ್ ಕ್ಯಾಂಟೀನಿನ ಮಾಲೀಕ. ಅವರಿಬ್ಬರೂ ಕಲಾಂ ಅವರಿಗೆ ಪರಿಚಿತರೇ. ಹಿಂದೆ ಕಲಾಂ ಅವರು ತ್ರಿವೇಂದ್ರಂನಲ್ಲಿ ವಿಜ್ಞಾನಿಯಾಗಿದ್ದಾಗ ಯಾವಾಗಲೂ ಆ ಚಮ್ಮಾರನ ಸೇವೆ ಪಡೆಯುತ್ತಿದ್ದರು ಮತ್ತು ಆ ಪುಟ್ಟ ಹೋಟೆಲಿಗೆ ಭೇಟಿಕೊಡುತ್ತಿದ್ದರು. ರಾಷ್ಟ್ರಪತಿಯಾಗಿ ತಿರುವನಂತಪುರಕ್ಕೆ ಬಂದಾಗ ಅವರ ಸ್ಮರಣೆಯಲ್ಲಿದ್ದ ಈ ಇಬ್ಬರನ್ನೂ ರಾಜಭವನಕ್ಕೆ ಕರೆಯಿಸಿ ಅಲ್ಲಿನ ಅತಿಥಿಗಳಾಗಿ ತಂಗಲು ವ್ಯವಸ್ಥೆ ಮಾಡಿದ್ದು ಕಲಾಂ ಅವರ ಸರಳತೆ ಮತ್ತು ಸ್ನೇಹಕ್ಕೆ ಒಂದು ನಿದರ್ಶನ. ಜೀವಮಾನದಲ್ಲಿಯೇ ರಾಜಭವನವನ್ನೇ ನೋಡದ ಇಬ್ಬರು ಅಪರೂಪದ ಅತಿಥಿಗಳಿಗೆ ಕಲಾಂ ಅವರ ಮೂಲಕ ತಮ್ಮ ಜನ್ಮ ಸಾರ್ಥಕವಾಯಿತೆಂಬ ತೃಪ್ತಿ ಬೇರೆ.

ವಿನೋಬಾರವರ ಮನೋಧರ್ಮ

ವಿನೋಬಾ ಭಾವೆ ನಮ್ಮ ದೇಶದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು. ಮಹಾರಾಷ್ಟ್ರದ ಗೋಗಡಾ ಎಂಬ ಹಳ್ಳಿಯಲ್ಲಿ 1895ರಲ್ಲಿ ಜನಿಸಿದ ವಿನೋಬಾ ಅವರ ಪೂರ್ಣ ಹೆಸರು ವಿನಾಯಕ ನರಹರಿ ಭಾವೆ. ಗಾಂಧೀಜಿಯವರ ನಿಕಟವರ್ತಿಯಾಗಿ, ಗಾಂಧೀಜಿಯವರಿಂದ ಸ್ಫೂರ್ತಿಗೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡವರು. ಭೂದಾನ ಚಳುವಳಿಯ ಮೂಲಕ ಸಹಸ್ರಾರು ಎಕರೆ ಭೂಮಿಯನ್ನು ದಾನವಾಗಿ ಪಡೆದು ಅದನ್ನು ಅವಶ್ಯವಿರುವವರಿಗೆ ನೀಡಿದರು. ಸರ್ವೋದಯ ಚಳುವಳಿಯ ಮೂಲಕ ಜನರ ಪರಿಸ್ಥಿತಿ ಸುಧಾರಿಸಲು ಶ್ರಮಿಸಿದರು. ಕುರಾನಿನ ಸಾರ, ಕ್ರಿಸ್ಟಿಯನ್ ಬೋಧನೆಯ ಸಾರ, ಸ್ವರಾಜ್ಯ ಶಾಸ್ತ್ರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ಸಂಚರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಒಮ್ಮೆ ವಿನೋಬಾ ಬಾಲ್ಯದಲ್ಲಿ ನಡೆದ ಘಟನೆಯಿದು. ಬರೋಡಾದಲ್ಲಿ ಮೂರನೇ ತರಗತಿ ಓದುತ್ತಿರುವಾಗ ಅವರ ಮನೆಯ ಪಕ್ಕದಲ್ಲಿ ಒಂದು ಕುಟುಂಬ ಇತ್ತು. ಆ ಕುಟುಂಬದ ಗೃಹಿಣಿ ಅನಾರೋಗ್ಯ ನಿಮಿತ್ತ ಹಾಸಿಗೆ ಹಿಡಿದಾಗ ಅದನ್ನು ನೋಡಿ ವಿನೋಬಾರವರ ತಾಯಿ ರುಕ್ಮಿಣಿಮಾ ಅವರಿಗೆ ಸಹಾಯ ಮಾಡಲು ಮುಂದಾದರು. ಯಾರಾದರೂ ಕಷ್ಟದಲ್ಲಿದ್ದರೆ ಅವರಿಗೆ ಸ್ಪಂದಿಸುವ ಒಳ್ಳೆಯ ಮನಸ್ಸು ಆ ತಾಯಿಗಿತ್ತು. ಹೀಗಾಗಿ ರುಕ್ಮಿಣಿತಾಯಿ ಮೊದಲು ತಮ್ಮ ಮನೆಯ ಅಡಿಗೆಯನ್ನು ಮಾಡಿಟ್ಟು ನಂತರ ಅಸ್ವಸ್ಥ ಗೃಹಿಣಿಯ ಮನೆಗೆ ಹೋಗಲು ಸಿದ್ಧರಾದರು. ಇದನ್ನೆಲ್ಲಾ ಬಾಲಕ ವಿನಾಯಕ ಗಮನಿಸುತ್ತಿದ್ದ. ಅವನು ತಾಯಿಯನ್ನು ಈ ರೀತಿ ಪ್ರಶ್ನಿಸಿದ. "ಅಮ್ಮಾ, ನೀನೆಷ್ಟು ಸ್ವಾರ್ಥಿ? ಮೊದಲು ನಮ್ಮ ಮನೆಯ ಅಡಿಗೆಯನ್ನು ಮಾಡಿ ನಂತರ ಅವರ ಮನೆಗೆ ಹೋಗಿ ಅಡುಗೆ ಮಾಡುತ್ತೀಯಲ್ಲಾ? ಇದು ನನಗೆ ಸರಿ ಕಾಣುತ್ತಿಲ್ಲ. ಅವರಿಗೆ ಮೊದಲು ಆಹಾರದ ಅವಶ್ಯಕತೆ ಇದೆಯಲ್ಲವೆ?" ಅದನ್ನು ಕೇಳಿದ ತಾಯಿ ಹೀಗೆ ಉತ್ತರಿಸಿದಳು, 'ಮಗೂ ನೀನು ಹೇಳುತ್ತಿರುವುದು ಸರಿ. ಆದರೆ ನೀನೆಷ್ಟು ಮೂರ್ಖನಿದ್ದೀಯ? ನಾನು ಬೆಳಿಗ್ಗೆಯೇ ಹೋಗಿ ಮೊದಲು ನೆರೆಮನೆಯ ಅಡುಗೆಯನ್ನು ಸಿದ್ಧಗೊಳಿಸಿದರೆ ಅವರು ಊಟ ಮಾಡುವ ವೇಳೆ ಅದು ಆರಿ ಹೋಗುವುದಿಲ್ಲವೇ? ಆದ್ದರಿಂದ ನಾನು ನನ್ನ ಮನೆಯ ಅಡುಗೆಯನ್ನು ಸಿದ್ಧಗೊಳಿಸಿ, ನಂತರ ಅವರ ಮನೆಯ ಅಡುಗೆಯನ್ನು ಸಿದ್ಧಪಡಿಸಿದರೆ ಅವರು ಬಿಸಿಬಿಸಿಯಾಗಿ ಊಟ ಮಾಡಬಹುದಲ್ಲಾ" ಈ ಮಾತನ್ನು ಕೇಳಿ ವಿನಾಯಕನಿಗೆ ತನ್ನ ಸಣ್ಣತನಕ್ಕಾಗಿ ನಾಚಿಕೆಯಾಯಿತು. ತಾಯಿಯ ಪ್ರೀತಿ, ಕರುಣೆ, ಆಲೋಚನಾ ಲಹರಿ, ಮತ್ತು ಪ್ರಾಮಾಣಿಕತೆ ಅವನ ಮನಸ್ಸಿನ ಮೇಲೆ ಅದ್ಭುತ ಪರಿಣಾಮ ಬೀರಿ ಅವರನ್ನು ಒಬ್ಬ ಪರಿಪೂರ್ಣ ವ್ಯಕ್ತಿಯನ್ನಾಗಿಸುವಲ್ಲಿ ನೆರವಾಯಿತು.

ಗೋಪಾಲಕೃಷ್ಣ ಅಡಿಗ

ಕನ್ನಡ ನವ್ಯಕಾವ್ಯದ ಆದಿಕವಿಯೆಂದೇ ಪ್ರಖ್ಯಾತರಾದ ಎಂ.ಗೋಪಾಲಕೃಷ್ಣ ಅಡಿಗರು ಜನಿಸಿದ್ದು ಫೆಬ್ರವರಿ 18, 1918. ಹೀಗಾಗಿ ಅವರ ಜನ್ಮ ಶತಮಾನೋತ್ಸವವನ್ನು 2018ರಲ್ಲಿ ಆಚರಿಸಲಾಯಿತು. ಅಡಿಗರು ತಮ್ಮ ಕಾವ್ಯದ ಉಚ್ಛ್ರಾಯ ಸ್ಥಿತಿಯಲ್ಲಿಯೇ ತನ್ನನ್ನು ತಾನೇ ನಿರಾಕರಿಸಿದ ಕವಿಯೆಂದು ಯು.ಆರ್.ಅನಂತ ಮೂರ್ತಿಯವರು ಬಣ್ಣಿಸಿದ್ದಾರೆ. ಅವರು ಬರೆದ ಭೂತ, ಗೊಂದಲಪುರ, ಮಣ್ಣಿನ ವಾಸನೆ ಕಾವ್ಯಗಳು ಒಂದೊಂದೂ ಒಂದು ಅನುಭವ ನೀಡುತ್ತವೆ. ಭಾವತರಂಗ, ಭೂಮಿಗೀತ, ವರ್ಧಮಾನ ಮುಂತಾದ ಕವನ ಸಂಕಲನಗಳು, ಅನಾಥೆ ಎಂಬ ಕಾದಂಬರಿಯನ್ನೂ ಬರೆದಿದ್ದಾರೆ. ಸಾಕ್ಷಿ ಪತ್ರಿಕೆ–ಯ ಸಂಪಾದಕರಾಗಿ, ವಿವಿಧ ಕಾಲೇಜುಗಳಲ್ಲಿ ಪ್ರಾಚಾರ್ಯರಾಗಿ, ನ್ಯಾಷನಲ್ ಬುಕ್ ಟ್ರಸ್ಟ್ ನ ಉಪ ನಿರ್ದೇಶಕರಾಗಿ ಸಹ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಕಬೀರ್ ಸಮ್ಮಾನ್, ಪಂಪ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಒಮ್ಮೆ ಅವರು ತಮ್ಮ ಗೆಳೆಯರೊಡನೆ ಮಾತನಾಡುತ್ತಿರುವಾಗ ಸಾಹಿತ್ಯ ರಚನೆಯ ಬಗ್ಗೆ ಮಾತು ಹೊರಳಿತು. ಸಾಹಿತ್ಯ ರಚನೆಯೆನ್ನುವುದು, ತಕ್ಷಣ ಮನಸ್ಸಿಗೆ ತೋಚುವುದನ್ನು ಗೀಚುವುದಲ್ಲ, ಅದೊಂದು ತಪಸ್ಸು ಎಂದು ತಿಳಿಸಿ, ತಮ್ಮ ಮೇಜಿನ ಮೇಲಿದ್ದ ಕಾಗದಗಳ ರಾಶಿಯಿಂದ ಒಂದು ಹಾಳೆಯನ್ನು ಎಳೆದರು. ಅದರಲ್ಲಿ ಅವರು ಬರೆದ ಕವನವೊಂದಿತ್ತು. ಅದನ್ನು ತಮ್ಮ ಗೆಳೆಯರಿಗೆ ತೋರಿಸಿ, 'ನೋಡಿ ಈ ಕವನವನ್ನು ಹತ್ತು ವರ್ಷಗಳ ಹಿಂದೆ ಬರೆದಿದ್ದೆ. ಇದು ಎಂದೋ ಪ್ರಕಟವಾಗಬೇಕಾಗಿತ್ತು. ಆದರೆ, ಈ ಕವನದ ಕೊನೆಯ ಎರಡು ಸಾಲುಗಳು ನನಗೆ ತೃಪ್ತಿ ತಂದಿಲ್ಲವಾಗಿದ್ದರಿಂದ ಅದನ್ನು ಪ್ರಕಟಿಸಿಲ್ಲ. ಆ ಕೊನೆ

ಸಾಲುಗಳನ್ನು ಬದಲಾಯಿಸಿದರೆ, ಇಡೀ ಕವನದ ಅರ್ಥವೇ ಬೇ–ರೆಯಾಗುತ್ತದೆ. ಹೀಗಾಗಿ ಏನು ಮಾಡುವುದೆಂದು ತಿಳಿದಿಲ್ಲೆಂದು ಹೇಳಿದರು. ಇದರಿಂದ ಬರವಣಿಗೆ ಅವರಿಗೊಂದು ಪವಿತ್ರ ಕಾರ್ಯವಾಗಿತ್ತು ಎಂದು ತಿಳಿದುಬರುತ್ತದೆ.

ಅವರೆಂದೂ ತಮ್ಮ ನಿಲುವನ್ನು ರಾಜಿಮಾಡಿಕೊಳ್ಳದ ಕವಿಯಾಗಿದ್ದುದರಿಂದಲೇ ಜಗತ್ತಿನ ಶ್ರೇಷ್ಠ ಕವಿಗಳ ಸಾಲಿಗೆ ಸೇರುತ್ತಾರೆ. ಒಮ್ಮೆಯಂತೂ ಅನಂತಮೂರ್ತಿಯವರು ಬರೆದ ಒಂದು ಕವನವನ್ನು ಅಡಿಗರಿಗೆ ಕೊಟ್ಟು ಅಭಿಪ್ರಾಯ ಕೇಳಿದಾಗ, ಅಡಿಗರು, ತಾವು ಬರೆದ 'ಪ್ರಾರ್ಥನೆ' ಎಂಬ ಹೆಸರಿನ ಪದ್ಯವನ್ನು ಅನಂತಮೂರ್ತಿಯವರಿಗೆ ಓದಲು ನೀಡಿದರು. ತಮ್ಮದೇ ಕವನದ ಸಾರಾಂಶವನ್ನೊಳಗೊಂಡ ಅದ್ಭುತ ಕವಿತೆ ಅದಾಗಿ–ತ್ತು. ತಮ್ಮ ಕವಿತೆಯನ್ನು ಅದಕ್ಕೆ ಹೋಲಿಕೆ ಮಾಡಿದಾಗ ಅಡಿಗರ ಕಾವ್ಯಶಕ್ತಿಯ ಮುಂದೆ ತಮ್ಮ ಕಾವ್ಯ ಸೊರಗಿರುವುದನ್ನು ಗಮನಿಸಿ ಅಂದಿನಿಂದ ಅನಂತಮೂರ್ತಿಯವರು ಕವನ ಬರೆಯುವುದನ್ನೇ ಬಿಟ್ಟರು.

ಸರ್.ಸಿ.ವಿ.ರಾಮನ್

ಡಾ. ಸಿ.ವಿ.ರಾಮನ್ನರು ನಮ್ಮ ಬಾರತದ ಶ್ರೇಷ್ಠ ವಿಜ್ಞಾನಿಗಲ್ಲಿ ಒಬ್ಬರು. ಭಾರತ–ಕ್ಕೆ ಮೊದಲ ನೊಬೆಲ್ ಪಾರಿತೋಷಕವನ್ನು ವಿಜ್ಞಾನಕ್ಕೆ ತಂದು ಕೊಟ್ಟ ಧೀಮಂತ. ಸದಾ ಅಧ್ಯಯನ ಶೀಲರಾಗಿದ್ದು, ಪ್ರಯೋಗಶಾಲೆಯಲ್ಲಿ ಹೊಸ ಹೊಸ ಪ್ರಯೋಗ ಮಾಡುತ್ತಾ ತರುಣ ವಿಜ್ಞಾನಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ತಮ್ಮ 16ನೆಯ ವಯಸ್ಸಿನಲ್ಲಿಯೇ ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಇಡೀ ವಿಶ್ವ ವಿದ್ಯಾಲಯಕ್ಕೇ ಮೊದಲಿರಾದ ಪ್ರತಿಭಾವಂತರು. ತಮ್ಮ ವಿದ್ಯಾಭ್ಯಾಸ ಮುಗಿಸಿದ ಮೇಲೆ ಭಾರತದ ಆರ್ಥಿಕ ಸೇವೆಗೆ ಆಯ್ಕೆಯಾದರು. ನಂತರ ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಿವೃತ್ತರಾದ ಮೇಲೆ ಬೆಂಗಳೂರಿಗೆ ಬಂದು ಅಲ್ಲಿ ರಾಮನ್ ಇನ್ಸ್ಟಿಟ್ಯೂಟ್ ಸಂಸ್ಥೆಯನ್ನು 1948ರಲ್ಲಿ ಸ್ಥಾಪಿಸಿ, ಅನೇಕ ತರುಣ ವಿಜ್ಞಾನಿಗಳನ್ನು ತಯಾರು ಮಾಡಿದರು.

ಒಮ್ಮೆ ಭಾರತರತ್ನ ಹಾಗೂ ನೊಬೆಲ್ ಪಾರಿತೋಷಕ ಪಡೆದ ಡಾ.ಸಿ.ವಿ.ರಾಮನ್ ಅವರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿದ್ದಾಗ ಕೆಲವು ಸಂಶೋಧಕ ವಿಜ್ಞಾನಿಗಳನ್ನು ನೇಮಕ ಮಾಡಿಕೊಳ್ಳಲು ಜಾಹಿರಾತು ನೀಡಿದ್ದರು. ಕರೆಗೆ ಸ್ಪಂದಿಸಿದ ಕೆಲವರು ಅರ್ಜಿ ಸಲ್ಲಿಸಿದ್ದರು. ಎಲ್ಲ ಹಂತಗಳಲ್ಲಿಯೂ ಪರೀಕ್ಷಿಸಿ ಕೊನೆಗೆ ಅಂತಿಮವಾಗಿ ಹತ್ತು ಜನರಿಗೆ ಸಂದರ್ಶನಕ್ಕಾಗಿ ಕರೆಹೋಯಿತು. ಸಂದರ್ಶನದ ದಿನ ಸ್ವತಃ ರಾಮನ್ ಅವರು ಕುಳಿತು, ಅತಿ ಅರ್ಹರಾದ ಒಂಭತ್ತು ಯುವಕರನ್ನು ಆಯ್ಕೆ ಮಾಡಿದರು. ಕೊನೆಗೆ ಮಲೆನಾಡಿನ ಒಬ್ಬ ತರುಣ ಆಯ್ಕೆಯಾಗಲಿಲ್ಲ. ಅದೇ ದಿನ ಸಂಜೆ ಸಭೆ ಸೇರಿ, ಒಂಭತ್ತು ತರುಣ ವಿಜ್ಞಾನಿಗಳಿಗೆ ನೇಮಕಾತಿ ಆದೇಶ ನೀಡಬೇಕೆಂದು ತೀರ್ಮಾನವಾಯಿತು. ಎಲ್ಲ ಸಭೆ ಮುಗಿದ ಮೇಲೆ ಹೊರ ಬಂದು ನೋಡುತ್ತಾರೆ, ಅಲ್ಲಿ ಆಯ್ಕೆಯಾಗದ ಆ ಯುವಕ ಬಾಗಿಲಿನ ಬಳಿಯೇ ನಿಂತಿದ್ದಾನೆ. ಆತನನ್ನು ನೋಡಿ ರಾಮನ್ ಹೇಳಿದರು, 'ನೀವಿನ್ನು ಹೊರಡಬಹುದು, ನೀವು ಆಯ್ಕೆಯಾಗಿಲ್ಲವೆಂದು ಆಗಲೇ ತಿಳಿಸಿಯಾಗಿದೆಯಲ್ಲಾ, ನಿಮಗೆ ಬಂದು ಹೋಗುವ ವೆಚ್ಚವನ್ನಾಗಲೇ ಪಾವತಿಸಿರಬೇಕಲ್ಲಾ' ಎಂದು ಹೇಳಿದರು, ಅದನ್ನು ಕೇಳಿ ಯುವಕ ಯತ್ತರಿಸಿದ, 'ಹೌದು ಸ್ವಾಮಿ ನನಗೆ ಆಯ್ಕೆಯಾಗಲಿಲ್ಲವೆಂದು ಬೇಸರವೇನೂ ಇಲ್ಲ. ಆದರೆ, ನನಗೆ ನೀಡಿರುವ ಪ್ರವಾಸಭತ್ಯೆಯಲ್ಲಿ ನನ್ನ ಖರ್ಚೆಲ್ಲಾ ಕಳೆದು ಇನ್ನೂ ಐದು ರೂ.ಗಳು ಉಳಿಯುತ್ತವೆ. ಅದನ್ನು ಹಿಂದಿರುಗಿಸೋಣವೆಂದರೆ, ಸಿಬ್ಬಂದಿಯೆಲ್ಲಾ ಮನೆಗೆ ಹೋಗಿದ್ದಾರೆ. ತಾವೀಗ ಸಭೆ ಮುಗಿಸಿ ಹೊರಬಂದಿರಿ. ದಯಮಾಡಿ ಇದನ್ನು ಒಪ್ಪಿಸಿಕೊಳ್ಳಬೇಕು. ನಮಗಲ್ಲದ ಹಣವನ್ನು ನಾವು ಬಳಸುವುದು ತಪ್ಪಾಗುತ್ತದೆ, ದಯಮಾಡಿ ತೆಗೆದುಕೊಳ್ಳಿ' ಎಂದು ಹೇಳಿ, ತನ್ನ ಕೈಯಲ್ಲಿದ್ದ ಐದು ರೂ.ಗಳನ್ನು ಹಿಂದಿರುಗಿಸಲನುವಾದ. ಅದನ್ನು ತಿಳಿದ ರಾಮನ್ನರ ಮನ ಮರುಗಿತು. ಇಂತಹ ಪ್ರಾಮಾಣಿಕ ವ್ಯಕ್ತಿ ನಮ್ಮ ಸಂಸ್ಥೆಗೆ ಅತ್ಯವಶ್ಯಕವಾಗಿ ಬೇಕು ಎಂದು ಭಾವಿಸಿ, ಆತನನ್ನು ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳಲು ನಿರ್ಧರಿಸಿದರು. ಯಾವಾಗಲೂ ಪ್ರಾಮಾಣಿಕತೆ ಫಲ ನೀಡುತ್ತದೆ ಎನ್ನುವುದನ್ನು ಈ ಘಟನೆ ತಿಳಿಸಿ ಕೊಡುತ್ತದೆ.

ಎಂ.ಎನ್.ಸುಂದರ ರಾಜ್
ಅಧ್ಯಕ್ಷರು, ಕರ್ನಾಟಕ ಸಂಘ,
ಶಿವಮೊಗ್ಗ.

ಈ ವಿಶೇಷ ಪುಟಕ್ಕೆ ನೀವೂ ಬರೆಯಬಹುದು ಲೇಖನಗಳನ್ನು jaikarunadunews@gmail.com. ಇಲ್ಲಿಗೆ ಕಳುಹಿಸಿ.

ಕವನ

ಮೈಸೂರು ದಸರಾ ನೋಡಲು ಸುಂದರ

ಮೈಸೂರು ದಸರಾ ನೋಡಲು
ಸುಂದರ ಆಚರಣೆ ಮನೋಹರ
ವಿಶ್ವ ವಿಖ್ಯಾತ ಜಂಬೂಸವಾರಿ
ಏನು ವೈಖರಿ ಬಹು ಅಚ್ಚರಿ,

ಕನ್ನಡ ನಾಡಿನ ಸರ್ವ ಶ್ರೇಷ್ಠ ಹಬ್ಬರಿ
ಸಂಸ್ಕೃತಿಯ ತಲೆಮಾರು
ಶ್ರೇಷ್ಠತೆಯ ತವರೂರು
ನಮ್ಮ ಮೈಸೂರು,

ಹರಿದು ಬರುವ ಜನಸ್ತೋಮ
ನೋಡಲು ಹೃದಯಂಗಮ
ವಿಶಿಷ್ಟ ಸಾಗರ ನಾಡಿನ ವೈಭವ
ಕರುನಾಡ ಕೀರ್ತಿಯ ಪರಂಪರೆ,

ರಾಜಮನೆತನದ ಕೀರ್ತಿ ಶಿಖರ
ಆ ವೈಭವ ನೂತನ ಚಿರನೂತನ
ರಾಜರಾಜೇಶ್ವರಿ ಚಾಮುಂಡೆಶ್ವರಿ
ತಾಯಿ ನೆಲೆಸಿರುವಳು,॥

ನವರಾತ್ರಿಯ ಹಬ್ಬ ನಾಡಕೀರ್ತಿ
ಸಂಸ್ಕೃತಿಯ ಆಚರಣೆ
ಎಲ್ಲೆಡೆಯೂ ಪಸರಿಸಿದೆ ಸಂತಸ
ಸೊಬಗು ಹರಡಿ ವಿಸ್ತರಿಸಿದೆ

ಗಾಯತ್ರಿ ಎಸ್ ಕೆ
ಶಿವಮೊಗ್ಗ

ಪತ್ರಿಕಾ ಜಾಹೀರಾತಿಗಾಗಿ ಸಂಪರ್ಕಿಸಿ

ಜೈ ಕರುನಾಡು
ಕನ್ನಡ ಸಂಜೆ ದಿನಪತ್ರಿಕೆ
ಕಚೇರಿ ವಿಳಾಸ
ಶ್ರೀ ನಾರಾಯಣಗುರು ಸಹಕಾರ ಭವನ,
ಸಾಗರ ರಸ್ತೆ, ಗಾಡಿಕೊಪ್ಪ, ಶಿವಮೊಗ್ಗ
ಮೊಬೈಲ್ : 9448808516

ದುಷ್ಟ ಶಕ್ತಿಯ ವಿರುದ್ಧ ದಸರಾ ಆಚರಣೆ

ಅನಿತಾ ಮಧು ಬಂಗಾರಪ್ಪ

ಸೊರಬ: ದುಷ್ಟ ಶಕ್ತಿಯ ವಿರುದ್ಧವಾದ ದಸರಾ ಹಬ್ಬವನ್ನು ಮಹಿಳೆಯನ್ನು ಗೌರವಿಸುವ ಸ್ವರೂಪದಲ್ಲಿ ಆಚರಿಸಲಾಗುತ್ತಿದೆ ಎಂದು ಅನಿತಾ ಮಧು ಬಂಗಾರಪ್ಪ ಹೇಳಿದರು.

ಪಟ್ಟಣದ ಶ್ರೀ ರಂಗನಾಥ ದೇವಸ್ಥಾನದ ಆವರಣದಲ್ಲಿ ದಸರಾ ಉತ್ಸವ ಸಮಿತಿ, ತಾಲೂಕು ಆಡಳಿತ, ಪುರಸಭೆ ವತಿಯಿಂದ ಶನಿವಾರ ಹಮ್ಮಿಕೊಂಡ ದಸರಾ ಉತ್ಸವದಲ್ಲಿ ಮಹಿಳಾ ದಸರಾ ಉತ್ಸವ ಕಾರ್

ಸುದ್ದಿ ಸಾಲು

ದೇವಾಂಗ ಸಂಘದ ರಾಜ್ಯ ಘಟಕಗಳಿಗೆ ಜಿಲ್ಲೆಯಿಂದ ಸದಸ್ಯರ ಅವಿರೋಧ ಆಯ್ಕೆ

ಶಿವಮೊಗ್ಗ : ಕರ್ನಾಟಕ ರಾಜ್ಯ ದೇವಾಂಗ ಸಂಘದ ವಿವಿಧ ಘಟಕಗಳಿಗೆ ಶಿವಮೊಗ್ಗ ಜಿಲ್ಲೆಯಿಂದ ಈ ಕೆಳಕಂಡವರನ್ನು ಅವಿರೋಧ ವಾಗಿ ಆಯ್ಕೆ ಮಾಡಲಾಗಿದೆ ಎಂದು ಸಮಾಜದ ರಾಜ್ಯ ಮುಖಂಡರಾದ ಟಿ. ರಾಜೇಶ್ ಹಾಗೂ ಡಿ.ಟಿ. ವೆಂಕಟೇಶ್ ಅವರು ತಿಳಿಸಿದ್ದಾರೆ.

ಮಹಿಳಾ ಘಟಕಕ್ಕೆ ಟಿ.ಆರ್. ಶೇಷಮ್ಮ, ರೇಖಾ ರವಿಕುಮಾರ್, ಜಯಮ್ಮ ಚಂದ್ರಶೆಟ್ಟಿ, ಬಿ.ಜೆ. ಕಲಾವತಿ, ಯುವಘಟಕಕ್ಕೆ ಡಿ. ಹೇಮಂತಕುಮಾರ್, ಡಿ. ಪ್ರದೀಪ್, ಎಂ. ದರ್ಶನ್, ಹೆಚ್.ಜಿ. ಕಿರಣ್ ಇವರು ಆಯ್ಕೆಯಾಗಿದ್ದಾರೆ.

ನಿಧಿ ಆಪ್ಕೆ ನಿಕಟ್ ಸಭೆ

ಶಿವಮೊಗ್ಗ: ಕಾರ್ಮಿಕರಿಗೆ ಲಭ್ಯವಿರುವ ವಿವಿಧ ಪ್ರಯೋಜನೆಗಳ ಬಗ್ಗೆ ಅರಿವು ಮೂಡಿಸುವ ನಿಧಿ ಆಪ್ಕೆ ನಿಕಟ್ 2.0 ಕಾರ್ಯಕ್ರಮ ಅ.27 ರಂದು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಪಟ್ಟಣ ಪುರಸಭೆ, ಶಿರಾಳಕೊಪ್ಪ, ಶಿಕಾರಿಪುರ ತಾಲ್ಲೂಕು ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಶ್ರೀ ಶೈಲ ಶಿಕ್ಷಣ ಮಹಾವಿದ್ಯಾಲಯ, ವೇಗೇಶ ನಗರ, ಪಿ.ಬಿ ರಸ್ತೆ, ಹರಿಹರ ಇಲ್ಲಿ ಆಯೋಜಿಸಲಾಗಿದೆ. ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಮತ್ತು ಪಿಂಚಣಿದಾರರಿಗೆ ಮಧ್ಯಾಹ್ನ 2.30 ರಿಂದ ಸಂಜೆ 4 ಗಂಟೆವರೆಗೆ ನಡೆಯಲಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಕಮಿಷನರ್ ತಿಳಿಸಿದ್ದಾರೆ.

ಎಂಜಿನಿಯರ್ಸ್ ಘಟಕಕ್ಕೆ ಎಸ್.ಎನ್. ಚಂದ್ರಶೇಖರ್, ಪ್ರೇಮಾ ವಿಜಯಕುಮಾರ್, ಸಿ.ಜೆ . ಪಾಟೀಲ್, ಡಾಕ್ಟರ್ಸ್ ಘಟಕಕ್ಕೆ ಡಾ. ಎ.ಎಸ್. ದಯಾನಂದ್, ಡಾ. ಎಂ. ರವಿ, ಡಾ. ಡಿ. ಕೃಷ್ಣಮೂರ್ತಿ, ಡಾ. ಈ. ಶ್ರೀಧರ್, ವಕೀಲರ ಘಟಕಕ್ಕೆ ವೇಣುಗೋಪಾಲ್, ಜಿ. ಪರಮೇಶ್ವರಪ್ಪ , ಕು. ಸುಪ್ರಿಯಾ ಹಾಗೂ ವರ್ತಕರ ಘಟಕಕ್ಕೆ ಎಂ. ಕಾಂತರಾಜ್, ಆರ್. ಮಣಿಕಂಠ, ಬಿ. ಗೋಪಿನಾಥ್ ಇವರು ರಾಜ್ಯಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ನೈರುತ್ಯ ಪದವೀಧರರ ಕ್ಷೇತ್ರದ ಮತದಾರರ ನೋಂದಣಿ

ಶಿವಮೊಗ್ಗ; ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ನೈರುತ್ಯ ಪದವೀಧರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಸಲು ನ.06ರೊಳಗೆ ನಮೂನೆ –18 ರಲ್ಲಿ ಅರ್ಹ ಪದವೀಧರರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಮೈಸೂರು ವಿಭಾಗದ ಕರ್ನಾಟಕ ನೈರುತ್ಯ ಪದವೀಧರರ ಕ್ಷೇತ್ರದ ಪ್ರಾದೇಶಿಕ ಆಯುಕ್ತರು ಈಗಾಗಲೇ ಸೂಚಿಸಿರುತ್ತಾರೆ. ಇದುವರೆಗೂ ಹೆಸರನ್ನು ನೋಂದಾಯಿಸಿಕೊಳ್ಳದೇ ಇರುವ ಪದವೀಧರರು ನ. 06 ರೊಳಗಾಗಿ ಅರ್ಜಿಯನ್ನು ಸಲ್ಲಿಸುವುದು. ವಿವರಗಳಿಗಾಗಿ ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ವೆಬ್‌ಸೈಟ್ www.ceokarnataka.kar.nic.in ನ್ನು ಸಂಪರ್ಕಿಸುವುದು.

ನೈರುತ್ಯ ಶಿಕ್ಷಕರ ಮತದಾರರ ನೋಂದಣಿ

ಶಿವಮೊಗ್ಗ: ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ನೈರುತ್ಯ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಸಲು ನ.06 ರೊಳಗೆ ನಮೂನೆ –19 ರಲ್ಲಿ ಅರ್ಹ ಶಿಕ್ಷಕರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಮೈಸೂರು ವಿಭಾಗದ ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರದ ಪ್ರಾದೇಶಿಕ ಆಯುಕ್ತರು ಈಗಾಗಲೇ ಸೂಚಿಸಿರುತ್ತಾರೆ. ಇದುವರೆಗೂ ಹೆಸರನ್ನು ನೋಂದಾಯಿಸಿಕೊಳ್ಳದೇ ಇರುವ ಶಿಕ್ಷಕರು ನ. 06 ರೊಳಗಾಗಿ ಅರ್ಜಿಯನ್ನು ಸಲ್ಲಿಸುವುದು. ವಿವರಗಳಿಗಾಗಿ ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ವೆಬ್‌ಸೈಟ್ www.ceokarnataka.kar.nic.in ನ್ನು ಸಂಪರ್ಕಿಸುವುದು.

28ರಂದು ಕನ್ನಡ ನಾಟಕ ಶಿವದೂತ ಗುಳಿಗ ಪ್ರದರ್ಶನ

ಶಿವಮೊಗ್ಗ: ರಂಗಭೂಮಿಯಲ್ಲಿ ದಾಖಲೆ ಸೃಷ್ಟಿಸಿದ ದೇಶ ವಿದೇಶಗಳಲ್ಲಿ ಮೆಚ್ಚುಗೆ ಪಡೆದ ಕನ್ನಡ ನಾಟಕ ಶಿವದೂತ ಗುಳಿಗ ಪ್ರದರ್ಶನ ಅ.28ರಂದು ಸಂಜೆ 6–30ಕ್ಕೆ ಕುವೆಂಪು ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಚಾಲಕ ಜಾದುಗಾರ್ ವಿಕ್ರಮ್ ಶೆಟ್ಟಿ ಹೇಳಿದರು.

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ನಾಟಕವೊಂದು ಅದ್ಭುತ ಹಾಗೂ ವಿಸ್ಮಯವಾಗಿದೆ. ಒಂದು ರೀತಿಯಲ್ಲಿ ಸಿನಿಮಾ ನೋಡಿದ ಹಾಗಾಗುತ್ತದೆ. ದೈವವನ್ನೇ ಮುಖ್ಯವಾಗಿಟ್ಟುಕೊಂಡು ವಿಭಿನ್ನ ಶೈಲಿಯಲ್ಲಿ ಈ ನಾಟಕ ಮೂಡಲಿದೆ. ಈ ಶಿವದೂತ ಗುಳಿಗ ಅಕ್ಟೋಬರ್ 28ರ ರಾತ್ರಿ ಕಾಣಿಸುತ್ತಾನೆ ಎಂದರು.

ಇದು ನಾಟಕವೇ ಆಗಿದ್ದರೂ ವಿಶಾಲ ಅರ್ಥದಲ್ಲಿ ನಮ್ಮ ಕೆಡುಕುಗಳನ್ನು ನಾಶಮಾಡಿ ನಮ್ಮ ಅಂತಃಶಕ್ತಿ ಬಡಿದೆಬ್ಬಿಸಿ ಒಳಿತನ್ನು ಉಂಟು ಮಾಡುವ ಶಕ್ತಿ ಈ ನಾಟಕಕ್ಕಿದೆ. ನಾಗಮಂಡಲ ಡಕ್ಕೆಬಲಿ ಭೂತಕೋಲದ ಉದ್ದೇಶ ಹೇಗಿದೆಯೋ ಅದೇ ಉದ್ದೇಶ ಈ ನಾಟಕಕ್ಕೂ ಇದೆ.

ಪೌರಾಣಿಕ ಅದ್ಧೂರಿ ದೃಶ್ಯ ಸಂಯೋಜನೆ ಹೊಂದಿರುವಂತಹ ಆಚಾರ, ವಿಚಾರ, ಸಂಸ್ಕೃತಿಗೆ ಸಂಬಂಧಿಸಿದ, ಜನರು ಆರಾಧಿಸುವ ದೈವಗಳ ಕಥಾನಕವನ್ನು ನಾಟಕವನ್ನಾಗಿ ರೂಪಿಸಲಾಗಿದೆ ಎಂದರು.

ರಂಗಪ್ರೇಮಿ ಕೆ.ಜಿ. ವೆಂಕಟೇಶ್ ಮಾತನಾಡಿ, ಪ್ರಮುಖ ನಿರ್ದೇಶಕರಲ್ಲೊಬ್ಬರಾಗಿರುವ ವಿಜಯಕುಮಾರ್ ಕೊಡಿಯಾಲ್‌ಬೈಲ್ ಅವರು "ಶಿವದೂತ ಗುಳಿಗ' ನಾಟಕದ ನಿರ್ದೇಶನ ಮಾಡಿದ್ದಾರೆ. ಎ.ಕೆ. ವಿಜಯ್ ಸಂಗೀತ ನೀಡಿದ್ದಾರೆ. ಇದು ಗೌರವ ಪ್ರವೇಶವಾಗಿದ್ದು, ಟಿಕೆಟ್ ಬೆಲೆ 500 ಮತ್ತು 1000ರೂ. ಇರುತ್ತದೆ. ಟಿಕೆಟ್ ಮತ್ತು ವಿವರಗಳಿಗೆ ಮೊ: 9448108222 ಮತ್ತು 8073579575ರಲ್ಲಿ ಸಂಪರ್ಕಿಸಬಹುದಾಗಿದೆ. ಮಂಗಳೂರಿನ ಪುರಭವನದಲ್ಲಿ ಆರಂಭವಾದ ಶಿವದೂತ ಗುಳಿಗ ನಾಟಕದ ಮೊದಲ ಹೆಜ್ಜೆಯಿಂದ ಹಿಡಿದು 517ನೇ ಪ್ರದರ್ಶನವಾಗಿದೆ. ಮತ್ತು 1000ದ ಪ್ರದರ್ಶನಕ್ಕೆ ಮುನ್ನುಗ್ಗುತಿದೆ. 37 ಕಲಾವಿದರು ಇದರಲ್ಲಿ ನಟಿಸುತ್ತಿದ್ದಾರೆ. ಪ್ರಥಮ ಪ್ರದರ್ಶನದಿಂದಲೇ ಈ ನಾಟಕ ಜನರನ್ನು ತನ್ನತ್ತ ಸೆಳೆಯುತ್ತಿದೆ ಎಂದರು.

ಯಕ್ಷಧ್ರುವ ಪಟ್ಲ ಸತೀಶ್ ಶೆಟ್ಟಿ, ತೆಲಿಕದ ಬೊಳ್ಳಿ ದೇವದಾಸ್ ಕಾಪಿಕಾಡ್, ಡಾ। ವೈಷ್ಣವಿ, ರವೀಂದ್ರ ಪ್ರಭು, ನರಸಿಂಹ ಕಿಣಿ, ವಿಶಾಲ್ ರಾಜ್ ಕೋಕಿಲ ಇವರ ಹಿನ್ನೆಲೆ ಸಂಗೀತವಿದ್ದು ಎ.ಕೆ. ವಿಜಯ್ ಸಂಗೀತ ನಿರ್ದೇಶನ ಮಾಡಿದ್ದಾರೆ.

ಗುಳಿಗನ ಪಾತ್ರವನ್ನು ಕಾಂತಾರದ ಗುರುವ ಪಾತ್ರಧಾರಿ ಸ್ವರಾಜ್ ಶೆಟ್ಟಿ ಮಾಡಿದ್ದಾರೆ. ನಿತೇಶ್ ಕಿನ್ನಿಗೋಳಿ, ವಿನೋದ್ ರಾಜ್ ಕೋಕಿಲ, ರಮೇಶ್ ಕಲ್ಕಡ್ಕ, ಕೀತ್ ಪುರ್ತಾಡೋ, ಧನು ಕುಲಾಲ್ ಬೊಳಂತೂರು, ಜಯರಾಮ ಅಚಾರ್ಯ ಮಂಜೇಶ್ವರ, ರಜತ್ ಕದ್ರಿ, ಶರಣ್ ಶೆಟ್ಟಿ ವೇಣೂರು, ಸಾಗರ ಮಡಂತ್ಯಾರ್, ರಕ್ಷಿತ ರಾವ್, ಕಾಜಲ್ ಬಂಗೇರ ನಾಟಕದಲ್ಲಿ ಅಭಿನಯಿಸಿದ್ದಾರೆ.

ರೋಗಿಗಳ ಆರೈಕೆ: ಶರಣ್ಯದ ಕಾರ್ಯ ಶ್ಲಾಘನೀಯ

ಶಿವಮೊಗ್ಗ: ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳ ಸೇವೆ ಮಾಡುವ ಜತೆಯಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸುತ್ತಿರುವ ಶರಣ್ಯ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಜಿಲ್ಲಾಧಿಕಾರಿ ಡಾ. ಆರ್.ಸೆಲ್ವಮಣಿ ಹೇಳಿದರು.

ಶಿವಮೊಗ್ಗ ತಾಲೂಕಿನ ಗಾಜನೂರು ಅಗ್ರಹಾರದಲ್ಲಿರುವ ಡಿಎಸ್‌ಎಲ್ ಟ್ರಸ್ಟ್‌ನ ಶರಣ್ಯ ಆರೈಕೆ ಕೇಂದ್ರ ವತಿಯಿಂದ ಆಯೋಜಿಸಿದ್ದ ಶ್ರೀ ಮಾತೆ ಚೌಡೇಶ್ವರಿ ಮತ್ತು ಶ್ರೀ ಭೂತೇಶ್ವರ ದೇವರುಗಳ ನವೀಕೃತದೇಗುಲದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಮಾನವೀಯ ನೆಲೆಯಲ್ಲಿ ಶರಣ್ಯ ಸಂಸ್ಥೆಯು ವಿಶೇಷ ಕಾರ್ಯ ನಡೆಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದೆ ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಮಾತನಾಡಿ, ಶರಣ್ಯ ಸಂಸ್ಥೆಯು ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದು, ರೋಗಿಗಳ ಆರೈಕೆಯಲ್ಲಿ ವಿಶೇಷ ಕಾಳಜಿ ವಹಿಸುತ್ತಿದೆ. ರೋಗಿಗಳ ಕಷ್ಟದ ದಿನಗಳಲ್ಲಿ ಅವರಿಗೆ ಉಚಿತ ಸೇವೆ ಮಾಡುತ್ತಿರುವುದು ಅಭಿನಂದನೀಯ ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಆರ್.ಸೆಲ್ವಮಣಿ, ಎಸ್‌ಪಿ ಜಿ.ಕೆ.ಮಿಥುನ್ ಕುಮಾರ್ ಅವರು ವಾರ್ಡ್‌ಗಳಿಗೆ ಭೇಟಿ ನೀಡಿ ವೀಕ್ಷಿಸಿದರು. ವಿಡಿಯೋ ಮುಖಾಂತರ ಸಂಸ್ಥೆಯ ವಿವರ ವೀಕ್ಷಿಸಿದರು. ಎರಡು ಬಿಲ್ವಪತ್ರೆಯ ಗಿಡಗಳನ್ನು ಆವರಣದಲ್ಲಿ ನೆಡಲಾಯಿತು. ರೋಗಿಗಳು ಗುಣಪಡಿಸಲಾಗದೇ ಇರುವ ಉಲ್ಬಣ ಸ್ಥಿತಿಯಲ್ಲಿ ಬಂದವರಿಗೂ ಉತ್ತಮ ಶುಶ್ರೂಷೆಯ ನಂತರದಲ್ಲಿ ಗುಣಮುಖರಾದ ಅನೇಕ ಉದಾಹರಣೆ ಶರಣ್ಯ ಸಂಸ್ಥೆಯಿಂದ ಆಗಿದೆ.

ಶರಣ್ಯ ಸಂಸ್ಥೆಯಗೌರವಾಧ್ಯಕ್ಷ, ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್.ಶಂಕರಮೂರ್ತಿ, ವಿಧಾನ ಪರಿಷತ್ ಸದಸ್ಯಡಿ.ಎಸ್.ಅರುಣ್, ಶರಣ್ಯ ಸಂಸ್ಥೆ ಅಧ್ಯಕ್ಷಟಿ.ಆರ್.ಅಶ್ವತ್ಥ್ ನಾರಾಯಣ ಶೆಟ್ಟಿ, ಮ್ಯಾನೇಜಿಂಗ್ ಟ್ರಸ್ಟಿ ಡಿ.ಎಲ್.ಮಂಜುನಾಥ್, ಸಹ ಕಾರ್ಯದರ್ಶಿ ಬಿ.ಎನ್.ಮಂಜುನಾಥ್, ಸಂದೀಪ್, ಶ್ವೇತಾ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ದಸರ ಸಂಪನ್ನ

ಡ್ರೋಣ್‌ಗಳು ಫೋಟೋ ಕ್ಲಿಕ್ಕಿಸಲು ಆಕಾಶದಲ್ಲಿ ಸಂಚರಿಸಿದ್ದು, ನಕ್ಷತ್ರಗಳಂತೆ ಗೋಚರಿಸಿದವು. ಹಲವರು ಮೊಬೈಲ್ ಹಾಗೂ ಹೆಲ್ಮಟ್‌ಗಳನ್ನು ಕಳೆದುಕೊಂಡರು.

ಪಕ್ಷಭೇದವಿಲ್ಲದೆ ರಾಜಕಾರಣಿಗಳು ಬನ್ನಿ ಮುಡಿಯುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾಜಿ ಡಿಸಿಎಂ ಈಶ್ವರಪ್ಪ, ಸಂಸದ ರಾಘವೇಂದ್ರ, ಪಾಲಿಕೆ ಮೇಯರ್ ಶಿವಕುಮಾರ್, ಉಪಮೇಯರ್ ಲಕ್ಷ್ಮೀ ಶಂಕರ್, ಪಾಲಿಕೆ ಸದಸದಯೆಯರು ಭಾಗವಹಿಸಿದ್ದರು. ಈಶ್ವರಪ್ಪ ಮತ್ತು ಸಂಸದರ ರಾಘವೇಜದ್ರ ಇಬ್ಬರೂ ಕೈ ಹಿಡಿದು ಜನರಿಗೆ ಶುಭಕೋರಿರುವುದು ದಸರಾ ಹಬ್ಬದ ವಿಶೇಷವಾಗಿತ್ತು.

ಸ್ಪರ್ಧೆಗೆ ಆಹ್ವಾನ

ಭಾಗವಹಿಸಿದ ಎಲ್ಲರಿಗೂ ಅಭಿನಂದನಾ ಪತ್ರ ನೀಡಲಾಗುವುದು. ಸ್ಪರ್ಧೆಯ ದಿನಾಂಕ ಮತ್ತು ಸ್ಥಳವನ್ನು ಮುಂದೆ ತಿಳಿಸಲಾಗುವುದು. ಕಲಾವಿದರ ನೈಜತೆಯ ಪರೀಕ್ಷೆಯನ್ನು ಸ್ಥಳದಲ್ಲಿಯೇ ಮಾಡಲಾಗುವುದು. ಸ್ಪರ್ಧೆ ನಿಯಮಾವಳಿ ಹೆಸರು ನೋಂದಾಯಿಸುವ ಬಗೆಗಿನ ಹೆಚ್ಚಿನ ಮಾಹಿತಿಗೆ ಹೊಸನಗರ:7411451189, ತೀರ್ಥಹಳ್ಳಿ :9449097981, ಶಿವಮೊಗ್ಗ : 8618304923, ಸಾಗರ:9980952630, ಸೊರಬ, ಶಿರಸಿ ಹಾಗೂ ಸಿದ್ದಾಪುರ: 9448123434 ಈ ಮೊಬೈಲ್ ನಂಬರುಗಳನ್ನು ಸಂಪರ್ಕಿಸಬಹುದೆಂದು ಆಯೋಜಕರು ತಿಳಿಸಿದ್ದಾರೆ.

ನೇತ್ರಾವತಿ ಆನೆ

ಆದರೆ ವಾಸವಿ ಶಾಲೆಯಲ್ಲಿ ಬಿಡಾರ ಬಿಟ್ಟಿರುವ ಮೂರು ಆನೆಗಳನ್ನ ತಾಲೀಮು ಮುಗಿಸಿ ವಾಪಾಸ್ ತರಲಾಗಿದೆ. ರಾತ್ರಿ 10 ಗಂಟೆಗೆ ನೇತ್ರಾವತಿ ಎಂಬ ಹೆಸರಿನ ಆನೆಗೆ ಹೆರಿಗೆಯಾಗಿದ್ದು, ಹೆಣ್ಣು ಮರಿಗೆ ಜನ್ಮ ನೀಡಿದೆ. ದಸರಾ ಹಬ್ಬದ ಆಯುಧ ಪೂಜೆಯ ದಿನ ಹುಟ್ಟಿದ ಈ ಹೆಣ್ಣು ಮರಿಗೆ ಚಾಮುಂಡಿ ಅಥವಾ ದಶಮಿ ಎಂದು ಹೆಸರಿಡುವ ಸಾಧ್ಯತೆ ಇದೆ.

ನಟರಿಗೆ ಉರುಳು

ಹಾಗೂ ಇತರೆ ಅಂಗಗಳ ಬಳಕೆ ಮಾಡಿರುವುದು ಬಹಿರಂಗಗೊಂಡು ಶಿಕ್ಷೆಗೊಳಗಾಗಿದ್ದಾರೆ. ಈಗ ರಾಜ್ಯದಲ್ಲೂ ಹುಲಿ ಉಗುರು ಬಳಕೆ ಮಾಡುತ್ತಿರುವ ಪ್ರಕರಣ ಬೆಳಕಿಗೆ ಬಂದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಪ್ರಾಣಿ ಜನ್ಮ ವಸ್ತುಗಳ ಬಳಕೆ ಸಂಗ್ರಹ, ಸಾಗಾಟ ಮೊದಲಿನಿಂದಲೂ ನಿಷೇಧಿಸಲಾಗಿದೆ. ಇಂತಹ ಅಪರಾಧಗಳಿಗೆ 7 ವರ್ಷ ಶಿಕ್ಷೆಯೂ ಇದೆ ಎಂದು ಈಶ್ವರ ಖಂಡ್ರೆ ಹೇಳಿದರು.

ಹುಲಿ ಉಗುರಿನ ಪೆಂಡೆಂಟ್ ಧರಿಸಿದ ಆರೋಪದ ಮೇಲೆ ಬಿಗ್ ಬಾಸ್ ಸ್ಪರ್ಧಿ ವರ್ತೂರು ಸಂತೋಷ್ ಬಂಧನದ ಬೆನ್ನಲ್ಲೇ ಅದೇ ಮಾದರಿಯ ಪೆಂಡೆಂಟ್ ಧರಿಸಿದ ಆರೋಪ ಇದೀಗ ಚಿತ್ರ ನಟರಾದ ದರ್ಶನ್ , ಜಗ್ಗೇಶ್, ರಾಕ್ ಲೈನ್ ವೆಂಕಟೇಶ್ , ನಿಖಿಲ್ ಕುಮಾರ್ ಸೇರಿದಂತೆ ಹಲವರಿಗೆ ಸಂಕಷ್ಟ ಎದುರಾಗಿದೆ. ಹುಲಿ ಉಗುರಿನ ಪೆಡೆ–ಂಟ್ ಧರಿಸಿದ ಆರೋಪದ ಮೇಲೆ ಬಿಗ್ ಬಾಸ್ ಸ್ಪರ್ಧಿ ಸಂತೋಷ್ ಅವರನ್ನು ರಾಮೋಹಳ್ಳಿ ವಲಯದ ಅರಣ್ಯಾಧಿಕಾರಿಗಳು ಶೋ ನಡೆಯುವಾಗಲೇ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಸದ್ಯ ಸಂತೋಷ್ ನ್ಯಾಯಾಂಗ ಬಂಧನದಲ್ಲಿದ್ದಾರೆ.ಇದರ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ಜನಸಾಮಾನ್ಯರಿಗೆ ಒಂದು ನ್ಯಾಯ , ಸೆಲೆಬ್ರಿಟಿಗಳಿಗೆ ಒಂದು ನ್ಯಾಯವೇ ಎಂದು ಆಕ್ರೋಶ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ ನಟರ ವಿರುದ್ಧ ಒಬ್ಬರ ಮೇಲೆ ದೂರು ದಾಖಲಾಗುತ್ತಿದ್ದು ಕಾನೂನು ಕ್ರಮಕ್ಕೆ ಒತ್ತಾಯ ಕೇಳಿ ಬಂದಿವೆ ನಿನ್ನೆ ನಟ ದರ್ಶನ್ ವಿರುದ್ಧ ಸರ್ವ ಸಂಘಟನೆಗಳ ಒಕ್ಕೂಟ ದೂರು ನೀಡಿದ್ದ ಬೆನ್ನಲ್ಲೇ ಜನತಾಪಕ್ಷ ಇಂದು ದೂರು ನೀಡಲು ನಿರ್ಧರಿಸಿದೆ.ಈ ನಡುವೆ ನಟ ಜಗ್ಗೇಶ್ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ದೂರು ನೀಡಲಾಗಿದ್ದು, ಇದೀಗ ಮಲ್ಲೇಶ್ವರಂ ಪೊಲೀಸರು ಠಾಣೆಯಲ್ಲಿ ದೂರು ನೀಡಲು ಸಜ್ಜಾಗಿದ್ದು ಹುಲಿ ಉಗುರು ನಟ ಜಗ್ಗೇಶ್ ಅವರ ಸಂತೋಷ ಕಸಿಯುತ್ತದಾ ಎನ್ನುವ. ಮಾತುಗಳು ಕೇಳಿ ಬಂದಿವೆ ನಟ, ನಿರ್ಮಾಪಕ ರಾಕ್ ಲೈನ್ ವೆಂಕಟೇಶ್ , ನಟ ನಿಖಿಲ್ ಕುಮಾರ ಸ್ವಾಮಿ ಅವರ ಕೊರಳಲ್ಲಿ ಇರುವ ಪೆಂಡೆಂಟ್ ಹುಲಿ ಉಗುರಿನದಾ ಅಥವಾ ಇಲಿ ಉಗುರಿನದಾ ಎನ್ನುವ ಮಾತು ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

ಸೆರೆ

ಈತನ ವಿರುದ್ಧ ಕೊಣಾಜೆ, ಮಂಗಳೂರು ಉತ್ತರ, ಪುತ್ತೂರು, ಬರ್ಕೆ, ವಿಟ್ಲ, ಉಳ್ಳಾಲ, ಬೆಂಗಳೂರು ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ಕಳೆದ 2010 ಮತ್ತು 2013 ಕಾಸರಗೋಡು ಬೇವಿಂಜ ಪಿಡಬ್ಲ್ಯುಡಿ ಗುತ್ತಿಗೆದಾರರ ಶೂಟೌಟ್ ಪ್ರಕರಣ, ಕೇರಳದ ಮಂಜೇಶ್ವರದಲ್ಲಿ ಕಳ್ಳತನ, ಕುಂಬಳೆ ಹಾಗೂ ವಿದ್ಯಾನಗರ ಠಾಣೆಯಲ್ಲೂ ಪ್ರಕರಣಗಳು ದಾಖಲಾಗಿವೆ. ಮಂಗಳೂರು ಉತ್ತರ ಠಾಣಾ ವ್ಯಾಪ್ತಿಯ ಸಂಜೀವ್ ಶೆಟ್ಟಿ ಸಿಲ್ಕ್ಸ್ ಮಳಿಗೆ ಮತ್ತು ಪುತ್ತೂರು ರಾಜಧಾನಿ ಜ್ಯುವೆಲ್ಲರ್ಸ್‌ನಲ್ಲಿ ಶೂಟೌಟ್ ನಡೆಸಿದ್ದನು.ಆರೋಪಿಯನ್ನು ಕೇರಳದಲ್ಲಿ ಬಂಧಿಸಲಾಗಿದ್ದು, ಈಗಲೂ ಹಫ್ತಾ ವಸೂಲಿಯಲ್ಲಿ ತೊಡಗಿಸಿಕೊಂಡಿದ್ದನು ಎನ್ನಲಾಗಿದೆ. ಎಸಿಪಿ ಧನ್ಯ ನಾಯಕ್ ನೇತೃತ್ವದ ತಂಡ ಮತ್ತು ಕೊಣಾಜೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ದೇವರ ಶಕ್ತಿಯ ಅರಿವಿನಿಂದ ಜೀವನ ಸಾರ್ಥಕ

ಶ್ರೀ ಮಾತಾಜಿ ವಿವೇಕಮಯಿ ಆಶೀರ್ವಚನ ॥ ಶ್ರೀ ದೊಡ್ಡಮ್ಮ ದೇವಿ ಅನುಗ್ರಹ, ರಾಷ್ಟ್ರೀಯ ಪುರಸ್ಕಾರ

ಶಿವಮೊಗ್ಗ: ಭಗವತಿಯ ಅನುಗ್ರಹದಿಂದಲೇ ಜಗತ್ತಿನಲ್ಲಿ ಸತ್ಕಾರ್ಯಗಳು ನಡೆಯುತ್ತಿವೆ. ಹೀಗಾಗಿ ದೇವರ ಶಕ್ತಿಯ ಅರಿವು ಹೊಂದುವ ಮೂಲಕ ಜೀವನ ಸಾರ್ಥಕಪಡಿಸಿಕೊಳ್ಳುವತ್ತ ಚಿಂತನೆ ನಡೆಸಬೇಕು ಎಂದು ಮಾಗಡಿ ಮತ್ತು ಬೆಂಗಳೂರು ಪೋಲೋಹಳ್ಳಿಯ ಶ್ರೀ ಭವತಾರಿಣಿ ಆಶ್ರಮದ ಅಧ್ಯಕ್ಷೆ ಮಾತಾಜಿ ವಿವೇಕಮಯಿ ಹೇಳಿದರು.

ಸೋಮಿನಕೊಪ್ಪ ಕೆಎಚ್‌ಬಿ ಪ್ರೆಸ್ ಕಾಲನಿಯ ಶ್ರೀ ದೊಡ್ಡಮ್ಮ ಚಾರಿಟಬಲ್ ಟ್ರಸ್ಟ್‌

ಸುದ್ದಿ ಸಾಲು

ಶಾಸಕ ಆರಗ ಜ್ಞಾನೇಂದ್ರ ಅವರ ನೇತೃತ್ವದಲ್ಲಿ ತೀರ್ಥಹಳ್ಳಿ ತಾಲೂಕು ಪಂಚಾಯತಿ ಸಿಬ್ಬಂದಿಗಳಿಂದ ನನ್ನ ಮಣ್ಣು ನನ್ನ ದೇಶ ಕಾರ್ಯಕ್ರಮವನ್ನು ನಡೆಸಲಾಯಿತು.

ಮೀನಾಕ್ಷಿ ಕೆ.ಎಚ್ ಅವರಿಗೆ ಗೌರವ ಡಾಕ್ಟರ್ ಪದವಿ ಪ್ರದಾನ

ಶಿವಮೊಗ್ಗ: ಭದ್ರಾವತಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮೀನಾಕ್ಷಿ ಕೆ.ಎಚ್ ಇವರಿಗೆ ಕುವೆಂಪು ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. ಇವರು "Women Entrepreneurship in Shivamogga District - A study" ಎಂಬ ವಿಷಯದ ಮೇಲೆ ಅರ್ಥಶಾಸ್ತ್ರ ವಿಭಾಗದ ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ ಜಿ. ಜಯರಾಮ ಭಟ್ ಇವರ ಮಾರ್ಗದರ್ಶನದಲ್ಲಿ ಮಹಾ ಪ್ರಬಂದವನ್ನು ಮಂಡಿಸಿರುತ್ತಾರೆ. ಮೀನಾಕ್ಷಿ ಅವರು ಶಿವಮೊಗ್ಗ ನಗರದ ಉದ್ಯಮಿ ಗಿರೀಶ್ ಕೆ ಡಿ ಅವರ ಪತ್ನಿ.

ಸಿಎ ನನ್ನ ಗುರಿ ಕುರಿತ ವಿಚಾರ ಸಂಕಿರಣ

ಶಿವಮೊಗ್ಗ: ಶಿವಮೊಗ್ಗ ಕೋಚಿಂಗ್ ಅಕಾಡೆಮಿ ವತಿಯಿಂದ ಆಚಾರ್ಯ ತುಳಸಿ ಕಾಲೇಜಿನ ಸಭಾಂಗಣದಲ್ಲಿ ಇತ್ತೀಚೆಗೆ "ಸಿ.ಎ. ನನ್ನ ಗುರಿ" ಎನ್ನುವ ವಿಚಾರವಾಗಿ ಸಮಾವೇಶ ಏರ್ಪಡಿಸಲಾಗಿತ್ತು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೋ. ಪಿ.ಪಿ. ಮಮತ ವಹಿಸಿದ್ದರು, ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮಂಗಳೂರಿನ ತ್ರಿಶಾ ಸಮುದಾಯ ಸಂಸ್ಥೆಗಳ ಮುಖ್ಯ ಸಚೇತರಾದ ಸಿ.ಎ.ಗೋಪಾಲಕೃಷ್ಣ ಭಟ್ ಮಾತನಾಡಿದರು, ಶಿವಮೊಗ್ಗ ಕೋಚಿಂಗ್ ಅಕಾಡೆಮಿಯ ನಿರ್ದೇಶಕರಾದ ರಮೇಶ್ ಹೆಗ್ಗಡೆ ಹೇಳಿದರು.

ಶಿವಮೊಗ್ಗ: ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದ ಹೇಮಾವತಿ ಮತ್ತು ಸಾಗರ್ ಆನೆಯನ್ನು ಗೌರವಪೂರ್ಣವಾಗಿ ಸಕ್ರೆ ಬಯಲು ಬಿಡಾರಕ್ಕೆ ನಿನ್ನೆ ರಾತ್ರಿ ಬೀಳ್ಕೊಡಲಾಯಿತು. ವಾಸವಿ ಶಾಲಾ ಆವರಣದಲ್ಲಿ ಆನೆಯ ಮಾವುತರಿಗೆ ಮತ್ತು ಸಿಬ್ಬಂದಿಗಳಿಗೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಪಾಲಿಕೆ ವತಿಯಿಂದ ಗೌರವಿಸಲಾಯಿತು.

ಶಿವಮೊಗ್ಗ: ಶಾಸಕಿ ಹಾಗೂ ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಉಪ ನಾಯಕಿ ಶಾರದಾ ಪೂರ್ಯಾನಾಯ್ಕರಿಗೆ ಜನಪರ ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ಸೇವಾ ಸಂಸ್ಥೆಯ ಅಧ್ಯಕ್ಷೆ ಯಶೋಧ ಶಮೀಪತ್ರೆ ಕೊಟ್ಟು ದಸರಾ ಶುಭಾಶಯ ಹೇಳಿದರು.

28ರಂದು ಸಾಹಿತ್ಯ ಹುಣ್ಣಿಮೆ, ಭೂಮಿ ಹುಣ್ಣಿಮೆ

ಶಿವಮೊಗ್ಗ : ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ವತಿಯಿಂದ ಸಾಹಿತ್ಯ ಬಳಗ, ನಾಗರಕೊಡಿಗೆ ಗ್ರಾಮಭಾರತಿ –ರಾಷ್ಟ್ರೋತ್ಥಾನ ಬಳಗ, ಕಾರಣಗಿರಿ, ಸಾಹಿತ್ಯ ಹುಣ್ಣಿಮೆ ಮತ್ತು ಭೂಮಿ ಹುಣ್ಣಿಮೆಯನ್ನು ಅ.28ರಂದು ಸಂಜೆ 5ಗಂಟೆಗೆ ಹೊಸನಗರ ತಾಲೂಕು ಕಾರಣಗಿರಿಯ ಶ್ರೀ ಸಿದ್ಧಿವಿನಾಯಕ ಸಭಾ ಭವನದಲ್ಲಿ ಏರ್ಪಡಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಡಿ. ಮಂಜುನಾಥ ಕಾರ್ಯಕ್ರಮ ಉದ್ಘಾಟಿಸಿದ್ದಾರೆ.

ಕಾರಣಗಿರಿ ರಾಷ್ಟ್ರೋತ್ಥಾನ ಬಳಗದ ಅಧ್ಯಕ್ಷರು ಹಾಗೂ ವಿಶ್ರಾಂತ ಪ್ರಾಂಶುಪಾಲ ನಳಿನಚಂದ್ರ ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿ ಹಾಗೂ ಉಪನ್ಯಾಸಕರಾದ ಡಾ. ಶ್ರೀಪತಿ ಹಳಗುಂದ ಅವರು ಮಣ್ಣಿಗೊಂದು ಹುಣ್ಣಿಮೆ ಕುರಿತ ಉಪನ್ಯಾಸ ನೀಡಲಿದ್ದಾರೆ.

ಸಂಜೆ 4 ಗಂಟೆಗೆ ಇದೇ ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು ಮತ್ತು ತಾಲೂಕು ಹೋಬಳಿ ಸಮಿತಿ ಪದಾಧಿಕಾರಿಗಳ ಸಮಾಲೋಚನಾ ಸಭೆ ನಡೆಯಲಿದೆ.

ಶಿವಮೊಗ್ಗ: ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ದಸರಾ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ಭರತ್‌ಕುಮಾರ್, ಎಎಸ್‌ಐಗಳಾದ ರಮೇಶ್, ಜಯಂತಿ, ಸಿಬ್ಬಂದಿಗಳಾದ ಅರುಣ್, ರವಿ, ಸತೀಶ್ ಅಣ್ಣಪ್ಪ, ಅನುಷಾ, ಗೌರಿ, ಶ್ರುತಿ, ನೇತ್ರಾವತಿ ಹಾಗೂ ನಾಜೀಮಾ ಇದ್ದರು.

ಬಿಜಿಎಸ್ ಗುರುಪುರದ ಅವಳಿ ಸಹೋದರರು ರಾಜ್ಯಮಟ್ಟದ ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಉತ್ತಮ ಸಾಧನೆ

ಎಸ್.ಪವನ್, ಎಸ್.ಪುನೀತ್ ರಾಷ್ಟ್ರಮಟ್ಟಕ್ಕೆ

ಶಿವಮೊಗ್ಗ: ನಗರದ ಪ್ರತಿಷ್ಠಿತ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಶಾಖೆಯ ಗುರುಪುರದ ಬಿಜಿಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 8 ನೇ ತರಗತಿ ಓದುತ್ತಿರುವ ಅವಳಿ ಸಹೋದರರಾದ ಪುನೀತ್.ಎಸ್. ಮತ್ತು ಪವನ್.ಎಸ್. ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಉತ್ತಮ ಸಾಧನೆ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

2023–24ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆ, ಉಪ ನಿರ್ದೇಶಕರ ಕಚೇರಿ, ರಾಮನಗರ ಜಿಲ್ಲೆ, ಕನಕಪುರದ ವಡಯರಳ್ಳಿಯ ಜೈನ್ ಸ್ಪೋರ್ಟ್ಸ್ ಶಾಲೆಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ 17 ವರ್ಷ ವಯೋಮಿತಿಯೊಳಗಿನ ಪ್ರೌಢ ಶಾಲಾ ಬಾಲಕರ ಬೆಂಗಳೂರು ವಿಭಾಗ ಮಟ್ಟದ ಷಟಲ್ ಬ್ಯಾಡ್ಮಿಂಟನ್ ಭಾಗವಹಿಸಿ, ಚಾಕ ಚಕ್ಕತೆಯ ಆಟದ ಪ್ರದರ್ಶನ ನೀಡಿ ಸಿಂಗಲ್ಸ್ ಮತ್ತು ಡಬಲ್ಸ್ ನಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ರಾಮನಗರ ಜಿಲ್ಲೆಯಲ್ಲಿ ಅ.19, 20 ರಂದು ಜೈನ್ ಸ್ಪೋರ್ಟ್ಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ 17 ವರ್ಷ ವಯೋಮಿತಿಯೊಳಗಿನ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಷಟಲ್ ಬ್ಯಾಡ್ಮಿಂಟನ್ ಲೀಗ್ ಮಾದರಿಯ ಪಂದ್ಯಾವಳಿಯಲ್ಲಿ ಪುನೀತ್ ಎಸ್ ಮತ್ತು ಪವನ್ ಎಸ್ ಲೀಗ್ ಮಾದರಿಯ ಎಲ್ಲ ಪಂದ್ಯಾವಳಿಗಳಲ್ಲಿ ಕಲಬುರ್ಗಿ ವಿಭಾಗ, ಬೆಳಗಾವಿ ವಿಭಾಗ, ಮೈಸೂರು ವಿಭಾಗಗಳ ಮಧ್ಯೆ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಅತ್ಯುತ್ತಮ ಆಟ ಪ್ರದರ್ಶಿಸಿ ಪ್ರಥಮ ಸ್ಥಾನ, ಪಾರಿತೋಷಕ ಹಾಗೂ ಬಂಗಾರದ ಪದಕವನ್ನು ಸಂಸ್ಥೆಯ ಮಡಿಲಿಗೆ ತಂದು ಕೊಟ್ಟಿದ್ದಾರೆ. ದೆಹಲಿಯಲ್ಲಿ ನಡೆಯುವ ರಾಷ್ಟ್ರ ಮಟ್ಟದ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ.

15 ವರ್ಷ ವಯೋಮಿತಿ ಒಳಗಿನ ಕನಾಟಕ ರಾಜ್ಯ ಷಟಲ್ ಬ್ಯಾಡ್ಮಿಂಟನ್ ರ್‍ಯಾಂಕಿಂಗ್‌ನಲ್ಲಿ ಪ್ರಥಮ ಸ್ಥಾನದಲ್ಲಿದ್ದು, 17 ವರ್ಷ ವಯೋಮಿತಿಯೊಳಗಿನ ಷಟಲ್ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವುದು ಮತ್ತೊಂದು ವಿಶೇಷ.

ಈ ವಿದ್ಯಾರ್ಥಿಗಳು ಶಿವಮೊಗ್ಗದ ಪುರಲೆಯ ವೆಂಕಟೇಶ ನಗರದ ಸುರೇಶ್ ಮತ್ತು ಶಕುಂತಲಾ ಅವರ ಪುತ್ರರಾಗಿದ್ದಾರೆ. ಇವರು ಪ್ರಸ್ತುತ ಬೆಂಗಳೂರಿನ ಸೆಲೆನೈಟ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ, ಶ್ರೀ ವಿನೋದ್ ಕುಮಾರ್ ಅವರ ಗರಡಿಯಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾರೆ.

ಈ ಕ್ರೀಡಾ ಪ್ರತಿಭೆಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಲಿ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರು, ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಸಂಸ್ಥೆಯ ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದದವರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಶುಭ ಹಾರೈಸಿದ್ದಾರೆ.

ಹೆಗ್ಗೋಡಿನಲ್ಲಿ ಕಲೆಗಳ ಸಂಗಡ ಮಾತುಕತೆ ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಮರ್ಶಕ ಟಿ.ಪಿ.ಅಶೋಕ್

ಕಲೆಗಳ ಸಂಘದೊಂದಿಗೆ ಆತ್ಮ–ವಿಮರ್ಶೆಗೊಡ್ಡಿಕೊಳ್ಳುವ ಕಾಲವಿದು

ಸಾಗರ: ಕೋವಿಡ್ ನಂತರ ಕೇವಲ ಒಂದು ಅತೀತಕ್ಕೆ ಮಾರ್ಪಡುವ, ಗತಿಗೆ ನೂಕುವ ಕಾಲಘಟ್ಟದಲ್ಲಿ ನಾವಿದ್ದೇವೆ. ಹೀಗಾಗಿ ನಮ್ಮ ಸಂವೇದನೆಗಳು ಮೊಟಕಾಗುತ್ತಿದ್ದು, ಆಯ್ಕೆಗಳು ಮೇಲ್ನೋಟಕ್ಕೆ ಸುಲಭ ವೆಂಬಂತೆ ಕಂಡುಬಂದರೂ, ಬೇರೆ ರೀತಿಯ ಆತ್ಮ ವಂಚನೆಗೆ ಒಡ್ಡಿಕೊಳ್ಳುತ್ತಿದ್ದೇವೆ. ಇಂಥ ಸಂದಿಗ್ಧ ಕಾಲದಲ್ಲಿಯೇ ನಮಗೆ ಕಲೆಗಳ ಮಹತ್ವ ಅರಿವಾಗುವುದು ಎಂದು ವಿಮರ್ಶಕ, ಶಿಬಿರ ನಿರ್ದೇಶಕ ಟಿ.ಪಿ. ಅಶೋಕ ಹೇಳಿದರು.

ತಾಲೂಕಿನ ಹೆಗ್ಗೋಡಿನಲ್ಲಿ ಶನಿವಾರದಿಂದ ಪ್ರಾರಂಭಗೊಂಡ ಕಲೆಗಳ ಸಂಗಡ ಮಾತುಕತೆ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದು ಯಾವುದೇ ಕಲೆಯಲ್ಲೂ ನಮಗೆ ಸರಳವಾದ ಆಯ್ಕೆಗಳನ್ನು ಮಾಡಿಕೊಳ್ಳುವುದಕ್ಕೆ, ಬದುಕಿನ ಬಗ್ಗೆ ಸರಳವಾದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲವನ್ನೂ ಸಂದಿಗ್ಧತೆಯಲ್ಲಿ, ಸಂಕೀರ್ಣತೆಯಲ್ಲಿ ಹಾಗೂ ಒಂದು ಸಮಗ್ರತೆಯಲ್ಲಿ ಕಾಣುವ ಒತ್ತಾಯವನ್ನು ಹೇರುತ್ತಿದೆ. ಅದು ನಮಗೆ ಎಲ್ಲವನ್ನೂ ಅವುಗಳ ನಿಜತ್ವದಲ್ಲಿ ನಮ್ಮ ನಮ್ಮ ಅನುಭವಗಳ ಹಿನ್ನೆಲೆಯಲ್ಲಿ ನಾವೇ ಪರೀಕ್ಷಿಸಿಕೊಳ್ಳುವ ಅವಕಾಶವನ್ನೂ ಒದಗಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಕಲೆಗಳ ಸಂಗಡ ಮಾತುಕತೆಯ ಮೂಲಕ ಪಠ್ಯಗಳ ಮೂಲಕ ಸೀಮಿತ ವಿವರಣೆಗಳ ಹೊರತಾಗಿಯೂ ವಿಭಿನ್ನ ಮಾಹಿತಿ ಸಂಗ್ರಹಿಸುವ ನಿಟ್ಟಿನಲ್ಲಿ ಗಮನ ಹರಿಸುತ್ತೇವೆ ಎಂದರು.

ಅಧ್ಯಕ್ಷ ಸಿದ್ಧಾರ್ಥ ಭಟ್, ಕಾರ್ಯದರ್ಶಿ ಶರತ್ ಬಾಬು, ರಂಗಕರ್ಮಿ ಅಕ್ಷರ, ನಿವೃತ್ತ ಪ್ರಾಧ್ಯಾಪಕ ಜಶವಂತ ಜಾಧವ್, ನಿರ್ದೇಶಕ ವೆಂಕಟರಮಣ ಐತಾಳ್, ರಂಗಕೇಂದ್ರದ ಪ್ರಾಂಶುಪಾಲ ಎಂ. ಗಣೇಶ, ಸಾಹಿತಿ ಜಯಂತ ಕಾಯ್ಕಿಣಿ, ರಂಗಕರ್ಮಿ ನಟರಾಜ್ ಹೊನ್ನವಳ್ಳಿ, ಕತೆಗಾರ ವಿವೇಕ ಶಾನಭಾಗ, ಸುಂದರ್ ಸರುಕ್ಕೈ, ರಂಗನಿರ್ದೇಶಕ ಇಕ್ಬಾಲ್‌ಅಹಮದ್, ಕೆ.ಜಿ. ಕೃಷ್ಣಮೂರ್ತಿ, ಸಾಹಿತಿ ವಸುಧೇಂದ್ರ ಮೊದಲಾದ ಸಾಹಿತಿ, ಲೇಖಕರು, ವಿಮರ್ಶಕರು, ಕಲಾವಿದರು ಶಿಬಿರದಲ್ಲಿ ಹಾಜರಿದ್ದರು.

ಶಿಬಿರದ ಮೊದಲ ದಿನ ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದತಿರುಗಾಟ ನಾಟಕದ ಹುಲಿಯ ನೆರಳು (ಚಂದ್ರಶೇಖರ ಕಂಬಾರರ ರಚನೆ) ಪ್ರಥಮ ಪ್ರದರ್ಶನಗೊಂಡಿತು. ಭಾನುವಾರಎಚ್. ಕೆ. ಶ್ವೇತಾರಾಣಿ ನಿರ್ದೇಶನದ ತಿರುಗಾಟ ನಾಟಕ ಆ ಲಯ ಈ ಲಯ (ಕನ್ನಡಕ್ಕೆ ನಟರಾಜ ಹೊನ್ನವಳ್ಳಿ) ಶಿವರಾಮ ಕಾರಂತ ರಂಗಮಂದಿರದಲ್ಲಿ ನಡೆಯಲಿದೆ.

ಕಲಾವಿದರ ಅಭಿವ್ಯಕ್ತಿಯ ಅನುಸಂಧಾನಕ್ಕಿದು ಮಾರ್ಗ

ಸಮಾಧಾನ, ಸಮಚಿತ್ತತೆಯಿಂದ ಜೀವನದ ಬೇರೆ ಬೇರೆ ಆಯಾಮಗಳನ್ನು ಕಲೆಗಳ ಸಂಗದೊಂದಿಗೆ ನಮಗೆ ನಾವೆ ಸ್ಪಷ್ಟಪಡಿಸಿಕೊಳ್ಳುತ್ತಾ ಸಾಗುವ ಹಾದಿಯಿದು. ಜಗತ್ತಿನ ದೊಡ್ಡ ಕಲಾವಿದರನ್ನು ಅವರ ಬದುಕಿನ ಸೂಕ್ಷ್ಮತೆಗಳಲ್ಲಿ ಬದುಕಿನ ಬೇರೆ ಬೇರೆ ಆಯಾಮಗಳನ್ನು ಗ್ರಹಿಸಿದ ರೀತಿ, ಹೇಗೆಲ್ಲ ಅಭಿವ್ಯಕ್ತಿಸಿದರು ಮತ್ತು ಅದರ ಜತೆಯಲ್ಲಿ ಅನುಸಂಧಾನ ಮಾಡುವ ಮುಖ್ಯ ಉದ್ದೇಶದಿಂದ ನೀನಾಸಂ ಮಾರ್ಪಾಡುಗಳನ್ನು ಮಾಡಿಕೊಂಡಿದೆ. ಹವ್ಯಾಸಿ ರಂಗತಂಡವಾಗಿ 1949ರಲ್ಲಿ ಪ್ರಾರಂಭವಾದ ನೀನಾಸಂ ಹೆಗ್ಗೋಡಿನ ಭಾಗದಲ್ಲಿ ಹಲವು ಪೀಳಿಗೆಯ ಹವ್ಯಾಸಿ ರಂಗಕರ್ಮಿಗಳಿಗೆ ವೇದಿಕೆಯಾಗಿದೆ. ಜತೆಯಲ್ಲಿ ರಂಗಭೂಮಿ ಎನ್ನುವು ದನ್ನು ಜೀವನವಾಗಿ, ಜೀವನಶೈಲಿಯಾಗಿ, ಇದುವರೆಗೂ ಜೀವಂತವಾಗಿರಿಸಿದೆ. ಈ ಕಾರ್ಯಕ್ರಮವೂ ಜೀವನವನ್ನು ನೋಡುವ ಹೊಸ ಕಣ್ಣುಗಳನ್ನು, ಇಂದ್ರಿಯಗಳನ್ನು ನೀಡಲಿದೆ.

–ಟಿ.ಪಿ. ಅಶೋಕ್

ಕರ್ನಾಟಕ ಜಾನಪದ ಪರಿಷತ್ತಿನಿಂದ ದಸರಾ ಜಾನಪದ ಸಂಭ್ರಮ

ಆಧುನಿಕತೆ ಆರ್ಭಟಕ್ಕೆ ಜಾನಪದ ಜಗ್ಗುವುದಿಲ್ಲ

ಶಿವಮೊಗ್ಗ: ಆಧುನಿಕತೆ ಎಷ್ಟೇ ಮುಂದುವರೆದರು ಜಾನಪದವನ್ನು ಎಂದಿಗೂ ಹಿಂದಿಕ್ಕಲು ಆಗದು ಎಂದು ಮಹಾನಗರ ಪಾಲಿಕೆ ಸದಸ್ಯ ಎಚ್.ಸಿ. ಯೋಗೀಶ್ ಹೇಳಿದರು.

ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಕಾಲಭೈರವೇಶ್ವರ ದೇವಾಲಯ ಆವರಣದಲ್ಲಿ ಏರ್ಪಡಿಸಿದ್ದ ದಸರಾ ಜಾನಪದ ಸಂಭ್ರಮ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಜಾನಪದ ತಂಡಗಳ ಜನಪದ ಹಾಡುಗಳ ವೃಂದಗಾಯನ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.

ದಸರಾ ಹಬ್ಬಕ್ಕೂ ಜಾನಪದ ಕಲೆಗು ಅವಿನಾಭಾವ ಸಂಬಂಧವಿದೆ. ನಮ್ಮ ಜನಪದರು ಹಬ್ಬಗಳನ್ನು ಸಂಭ್ರಮಿಸಲು ಜನಪದ ಕಲೆಗಳನ್ನು ಉಳಿಸಿ ಬೆಳಸಿಕೊಂಡು ಬಂದರು. ಆಧುನಿಕತೆ ಎಷ್ಟೇ ಮುಂದುವರೆದರೂ ಜನಪದವನ್ನು ಹಿಂದಿಕ್ಕಲು ಆಗದು. ಆ ಮಟ್ಟಗೆ ಶಕ್ತಿಯುತವಾಗಿ ಬೆಳೆದು ನಿಂತಿದೆ. ಅದನ್ನು ಜೋಪಾನ ಮಾಡುವ ಜವಾಬ್ದಾರಿ ಎಲ್ಲರದಾಗಬೇಕು ಎಂದು ಹೇಳಿದರು.

ಇದೇ ವೇಳೆ ವಿಜೇತ ತಂಡಗಳಾದ ಹೊಸಗಾನ ಸಂಗಮ ತಂಡ ಪ್ರಥಮ, ಸಾಗರದ ಕಲಾ ಸಿಂಚನ ತಂಡ ದ್ವಿತೀಯ, ಹವ್ಯಾಸಿ ಗಾಯಕರ ಬಳಗ ತೃತೀಯ ಬಹುಮಾನ ಪಡೆದಿದ್ದಾರೆ. ವಿಜೇತರಿಗೆ ನಗದು, ಪ್ರಶಸ್ತಿ ಪತ್ರ ಬಹುಮಾನ ನೀಡಲಾಯಿತು.

ಕರ್ನಾಟಕ ಜಾನಪದ ಪರಿಷತ್ತು ಉಪಾಧ್ಯಕ್ಷರಾದ ಡಿ.ಸಿ. ದೇವರಾಜ್ ಅಧ್ಯಕ್ಷತೆ ವಹಿಸಿದ್ದರು. ರೈತ ನಾಯಕರಾದ ಕೆ. ಟಿ. ಗಂಗಾಧರ, ಸಾಹಿತಿಗಳಾದ ಡಾ. ಕೆ. ಎಸ್. ಗಂಗಾಧರ, ಕವಿಗಳಾದ ಗಣೇಶ್ ಮೂರ್ತಿ ನಾಗರಕೊಡಿಗೆ, ಒಗಟು, ಗಾದೆಗಳನ್ನು ಹೇಳಿದ ಲೋಕೇಶ್ ಮಕ್ರಿ, ಕಸಾಪ ತಾಲೂಕು ಅಧ್ಯಕ್ಷ ಮಹಾದೇವಿ, ಕಸಾಪ ಜಿಲ್ಲಾ ಕಾರ್ಯದರ್ಶಿ ಡಿ.ಗಣೇಶ್, ಎಂ.ಎಂ. ಸ್ವಾಮಿ, ಕಸಾಸಾಂ ವೇದಿಕೆಯ ಸುಶೀಲಾ ಷಣ್ಮಗಂ, ಭೈರಾಪುರ ಶಿವಪ್ಪಗೌಡ, ಮಂಜಪ್ಪ, ಸೋಮಿನಕಟ್ಟಿ ಸೇರಿದಂತೆ ಮತ್ತಿತರರು ಹಾಜರಿದ್ದರು.

ಸಂಸದ ಬಿ.ವೈ.ರಾಘವೇಂದ್ರ ಅವರ

ವಾಟ್ಸಪ್ ಚಾನೆಲ್ ಲೋಕಾರ್ಪಣೆ

ಶಿವಮೊಗ್ಗ: ಸಂಸದ ಬಿ.ವೈ.ರಾಘವೇಂದ್ರ ಅವರ ಅಧಿಕೃತ ವಾಟ್ಸಪ್ ಚಾನೆಲ್ ಲೋಕಾರ್ಪಣೆ ಮಾಡಲಾಯಿತು. ನಗರದ ರಾಯಲ್ ಆರ್ಕಿಡ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವಾಟ್ಸಪ್ ಚಾನೆಲ್‌ಗೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಅವರು, ಡಿಜಿಟಲ್ ವಿಶ್ವವಿದ್ಯಾಲಯ, ಡಿಜಿಟಲೀಕರಣದ ಸಾಮಾಜಿಕ ಮಾಧ್ಯಮಗಳಲ್ಲಿ ಜನ ಸಂಪರ್ಕ ಮಾಡಲು ಈ ವಾಟ್ಸಪ್ ಚಾನೆಲ್ ಅನುಕೂಲವಾಗಿದೆ. ಪ್ರಧಾನಿಗಳು ಸಹ ವಾಟ್ಸಪ್ ಚಾನೆಲ್‌ನ್ನ ಅಧಿಕೃತ ಚಾನೆಲ್ ಆರಂಭಿಸಿದ್ದಾರೆ. ಮೂಲ ಉದ್ದೇಶ, ಸಾರ್ವಜನಿಕರು ಸ್ಪಂಧನೆಗೆ ಈ ಚಾನೆಲ್ ಅನುಕೂಲವಾಗಲಿದೆ. ಸಾರ್ವಜನಿಕರು ಈ ವಾಟ್ಸಾಪ್ ಮೂಲಕ ತಮ್ಮ ಸಮಸ್ಯೆಗಳನ್ನು, ಸಲಹೆಗಳನ್ನು ನೀಡಬಹುದು ಎಂದರು.

ಶಿವಮೊಗ್ಗ ಕ್ಷೇತ್ರ ಬೆಳೆಯುತ್ತಿದ್ದು ಪ್ರಪಂಚಕ್ಕೆ ಪರಿಚಯಿಸಲು ಈ ವಾಟ್ಸಪ್ ಚಾನೆಲ್ ಆರಂಭಿಸಲಾಗುತ್ತಿದೆ. ಕಿಮ್ಮನೆ ರೆಸಾರ್ಟ್‌ನ ಮಾಲೀಕ ಕಿಮ್ಮನೆ ಜಯರಾಮ್, ಎ